
















SINCE 1962

DAVANAGERE
URBAN CO-OPERATIVE BANK LTD.

57ನೇ

# ವಾರ್ಷಿಕ ವರದಿ
## 2017-18

## ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217,
ಪಿ.ಬಿ. ರಸ್ತೆ, ದಾವಣಗೆರೆ – 577 002

# ಕಾರ್ಯನಿರ್ವಾಹಕ ಮಂಡಲಿ ಸದಸ್ಯರು



ಬಿ.ಸಿ. ಉಮಾಪತಿ
ಅಧ್ಯಕ್ಷರು



ಕೋಗುಂಡಿ ಬಕ್ಕೇಶಪ್ಪ
ಉಪಾಧ್ಯಕ್ಷರು



ಮತ್ತಿಹಳ್ಳಿ ವೀರಣ್ಣ
ನಿರ್ದೇಶಕರು



ಶ್ರೀಮತಿ ಐ.ವಸಂತಕುಮಾರಿ
ವಕೀಲರು
ನಿರ್ದೇಶಕರು



ಪಲ್ಲಾಗಟ್ಟೆ ಶಿವಾನಂದಪ್ಪ
ನಿರ್ದೇಶಕರು



ಅಂದನೂರು ಮುಪ್ಪಣ್ಣ
ನಿರ್ದೇಶಕರು



ಎಂ. ಚಂದ್ರಶೇಖರ್
ನಿರ್ದೇಶಕರು



ಟಿ.ಎಸ್. ಜಯರುದ್ರೇಶ್
ನಿರ್ದೇಶಕರು



ದೇವರಮನಿ ಶಿವಕುಮಾರ್
ನಿರ್ದೇಶಕರು



ಅಜ್ಜಂಪುರ ಶೆಟ್ರು ವಿಜಯಕುಮಾರ್
ನಿರ್ದೇಶಕರು



ಹೆಚ್.ಎಂ. ರುದ್ರಮುನಿಸ್ವಾಮಿ
ನಿರ್ದೇಶಕರು



ಎಸ್. ರಾಜಕುಮಾರ್
ನಿರ್ದೇಶಕರು



ಶ್ರೀಮತಿ ಸುರೇಖ ಎಂ. ಚಿಗಟೇರಿ
ನಿರ್ದೇಶಕರು



ಮುಂಡಾಸ ವೀರೇಂದ್ರ
ಚಾರ್ಟರ್ಡ್ ಅಕೌಂಟೆಂಟ್
ವೃತ್ತಿಪರ ನಿರ್ದೇಶಕರು



ವಿ. ಲಿಂಗರಾಜು
ಚಾರ್ಟರ್ಡ್ ಅಕೌಂಟೆಂಟ್
ವೃತ್ತಿಪರ ನಿರ್ದೇಶಕರು



ಡಾ|| ಎ.ಕೆ. ರುದ್ರಮುನಿ
ಕಾರ್ಯನಿರ್ವಹಣಾ ನಿರ್ದೇಶಕರು



ಕಂಚಿಕೇರಿ ಮಹೇಶ್
ಕಾರ್ಯನಿರ್ವಹಣಾ ನಿರ್ದೇಶಕರು

## ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ



**ಬಿ.ಸಿ. ಉಮಾಪತಿ**
ಅಧ್ಯಕ್ಷರು



**ಕೋಗುಂಡಿ ಬಕ್ಕೇಶಪ್ಪ**
ಉಪಾಧ್ಯಕ್ಷರು

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ನಮ್ಮ ಬ್ಯಾಂಕಿನ 57ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಬ್ಯಾಂಕಿನ ಕಾರ್ಯ ನಿರ್ವಾಹಕ ಮಂಡಲಿಯ ಪರವಾಗಿ ಸ್ವಾಗತಿಸಲು ಹರ್ಷಿಸುತ್ತೇವೆ.

2017-18ನೇ ಸಾಲಿನ ವಾರ್ಷಿಕ ವರದಿ, ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಗಳನ್ನು ತಮ್ಮ ಪರಿಶೀಲನೆಗಾಗಿ ಕಳುಹಿಸಲಾಗಿದೆ. ಬ್ಯಾಂಕಿನ ಆರ್ಥಿಕ ಪ್ರಗತಿಯು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದಿದೆ ಎಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಬ್ಯಾಂಕಿನ ಲಾಭವು ರೂ.5.80 ಕೋಟಿ ಗಳಿಸಿದ್ದು, ಠೇವಣಿಗಳು ರೂ.289 ಕೋಟಿಗೂ ಮೀರಿದ್ದು ಹಿಂದಿನ ವರ್ಷಕ್ಕಿಂತ ರೂ.25 ಕೋಟಿಯಷ್ಟು ಹೆಚ್ಚಾಗಿದೆ. ಸಾಲ ಮತ್ತು ಮುಂಗಡಗಳು ರೂ.191 ಕೋಟಿಗೂ ಮೀರಿದ್ದು ಹಿಂದಿನ ವರ್ಷಕ್ಕಿಂತ ರೂ.26 ಕೋಟಿಯಷ್ಟು ಪ್ರಗತಿಯನ್ನು ಸಾಧಿಸಿದೆ. ಬ್ಯಾಂಕಿನ ದುಡಿಯುವ ಬಂಡವಾಳವು ರೂ.347 ಕೋಟಿಗೂ ಮೀರಿ ಹಿಂದಿನ ವರ್ಷಕ್ಕಿಂತ ರೂ.27 ಕೋಟಿಯಷ್ಟು ವೃದ್ಧಿಯಾಗಿ ಬ್ಯಾಂಕು ಪ್ರಗತಿ ಪಥದಲ್ಲಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ನಮ್ಮ ಬ್ಯಾಂಕಿನ ಈ ಅಭಿವೃದ್ಧಿಗೆ ಬಹುಮುಖ್ಯವಾಗಿ ಬ್ಯಾಂಕಿನ ಗ್ರಾಹಕರು, ಸದಸ್ಯರು, ಅರ್ಪಣಾ ಮನೋಭಾವನೆಯ ಆಡಳಿತ ಮಂಡಲಿ ಮತ್ತು ಸಿಬ್ಬಂದಿ ವರ್ಗ ಕಾರಣ ಎಂಬುದು ಸರ್ವವಿದಿತ. ಈ ವರ್ಷವೂ ಸಹ ಲೆಕ್ಕಪರಿಶೋಧನಾ ವರದಿಯಲ್ಲಿ ನಮ್ಮ ಬ್ಯಾಂಕು 'ಎ' ಆಡಿಟ್ ವರ್ಗದಲ್ಲಿ ಮುಂದುವರೆದಿರುವುದು ಸಂತಸದ ಸಂಗತಿ.

ನಮ್ಮ ಬ್ಯಾಂಕು ಆಧುನಿಕ ತಂತ್ರಜ್ಞಾನ ಅಳವಡಿಕೆಯಲ್ಲಿ ಮುಂಚೂಣಿಯಲ್ಲಿದ್ದು. ATM, POS, Ecom, IMPS ಸೌಲಭ್ಯಗಳ ಜೊತೆಗೆ, ಗ್ರಾಹಕರು ತಮ್ಮ ಮೊಬೈಲ್ ಮುಖಾಂತರ ಬ್ಯಾಂಕಿನ ವ್ಯವಹಾರಗಳನ್ನು ಮಾಡಲು ಅನುಕೂಲವಾಗುವಂತೆ "ಡಿಯುಸಿಬಿ ಮೊಬೈಲ್ ಬ್ಯಾಂಕಿಂಗ್ ಆಫ್" ಸೌಲಭ್ಯವನ್ನು ಈಗಾಗಲೇ ಗ್ರಾಹಕರಿಗೆ ಒದಗಿಸಲಾಗಿದೆ. ಈ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯವನ್ನು ಗ್ರಾಹಕರು ದಿನದ 24 x 7 ರವರೆಗೆ ಬಳಸಬಹುದಾಗಿರುತ್ತದೆ.

ನಮ್ಮ ಬ್ಯಾಂಕಿನ ಮೇಲೆ ಅಭಿಮಾನ ಮತ್ತು ವಿಶ್ವಾಸವಿಟ್ಟು ವ್ಯವಹರಿಸಿ ಬ್ಯಾಂಕಿನ ಪ್ರಗತಿಗೆ ಕಾರಣೀಭೂತರಾದ ಎಲ್ಲಾ ಸದಸ್ಯರಿಗೂ, ಗ್ರಾಹಕರಿಗೂ, ಸಂಘ-ಸಂಸ್ಥೆಗಳಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ನಮ್ಮ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ನಿಮ್ಮ ಸಹಕಾರವು ಸದಾಕಾಲ ಇರಲೆಂದು ವಿನಂತಿಸುತ್ತೇವೆ.

**ಕಾರ್ಯನಿರ್ವಾಹಕ ಮಂಡಲಿಯ ಪರವಾಗಿ**

K. Bakkeshappa
**(ಕೋಗುಂಡಿ ಬಕ್ಕೇಶಪ್ಪ)**
ಉಪಾಧ್ಯಕ್ಷರು

B.C. Umapathy
**(ಬಿ.ಸಿ. ಉಮಾಪತಿ)**
ಅಧ್ಯಕ್ಷರು

# ದಿ ದಾವಣಗೆರೆ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ದಾವಣಗೆರೆ

## 57ನೇ ವಾರ್ಷಿಕ ಮಹಾಸಭೆಯ ನೋಟೀಸು

ಬ್ಯಾಂಕಿನ 2017–18ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 08–09–2018 ನೇ ಶನಿವಾರ ಬೆಳಿಗ್ಗೆ 11–00 ಘಂಟೆಗೆ ನಗರದ **ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ** ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

### ಸಭೆಯ ಕಾರ್ಯಸೂಚಿ

**ಪ್ರಾರ್ಥನೆ.**

1. ದಿನಾಂಕ 17–09–2017 ರಂದು ನಡೆದ 56ನೇ ವಾರ್ಷಿಕ ಮಹಾಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು.
2. ಕಾರ್ಯನಿರ್ವಾಹಕ ಮಂಡಲಿಯವರು ತಯಾರಿಸಿರುವ 57ನೇ ವಾರ್ಷಿಕ ವರದಿಯನ್ನು (2017–18) ಪರಿಶೀಲಿಸುವುದು.
3. ದಿನಾಂಕ 31–03–2018ಕ್ಕೆ ಅಂತ್ಯವಾಗುವ ವರ್ಷದ ಲಾಭ–ನಷ್ಟ ಮತ್ತು ಆಢಾವೆ ಪತ್ರಿಕೆ ಪರಿಶೀಲನೆ ಮತ್ತು 2017–18ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಗೆ ಕಾರ್ಯನಿರ್ವಾಹಕ ಮಂಡಲಿಯು ತಯಾರಿಸಿದ ಅನುಪಾಲನಾ ವರದಿಯ ಪರಿಗಣನೆ.
4. 2017–18ನೇ ಸಾಲಿನ ಆಯವ್ಯಯದ ಅಂದಾಜಿಗಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2018–19ನೇ ಸಾಲಿಗೆ ಆಯವ್ಯಯ ಮಂಜೂರು ಮಾಡುವುದು.
5. 2017–18ನೇ ಸಾಲಿನ ಲಾಭ ವಿಲೇವಾರಿ ಮಾಡುವುದು.
6. ನಿರ್ದೇಶಕ ಮಂಡಲಿಯು 2018–19ನೇ ಸಾಲಿಗೆ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.
7. ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಯನ್ನು ಅನುಮೋದಿಸುವುದು.
8. 2018–19ನೇ ಸಾಲಿಗೆ ಬ್ಯಾಂಕಿನ ಶಾಸನ ಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಅನುಮೋದನೆ.
9. 2018–19ನೇ ಸಾಲಿಗೆ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗಧಿಪಡಿಸುವುದು.
10. ಬ್ಯಾಂಕಿನ ಸಿಬ್ಬಂದಿಗಳ ವೃಂದಬಲ ಮತ್ತು ವೇತನ ಶ್ರೇಣಿ ಅನುಮೋದನೆ.
11. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ಕಾರ್ಯನಿರ್ವಾಹಕ ಮಂಡಲಿ ಪರವಾಗಿ

**(ಡಿ. ವಿ. ಆರಾಧ್ಯಮಠ್)**
ಪ್ರಧಾನ ವ್ಯವಸ್ಥಾಪಕರು

ದಿನಾಂಕ: 18–08–2018

ಸೂಚನೆ : ಪ್ರಕಟಿತ ಆಸ್ತಿ–ಜವಾಬ್ದಾರಿ ತಃಖ್ತೆ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಅಥವಾ ಇತರೆ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಸ್ಪಷ್ಟೀಕರಣ ಬಯಸಿದಲ್ಲಿ ಸಭೆಯು ನಡೆಯುವುದಕ್ಕೆ 3 ದಿವಸ ಮುಂಚಿತವಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಿಳಿಸಿದ್ದಲ್ಲಿ ಅಧ್ಯಕ್ಷರ ಅನುಮತಿ ಪಡೆದು ಚರ್ಚಿಸಲು ಅವಕಾಶವಿರುತ್ತದೆ. ನಂತರ ಬಂದ ವಿಷಯವನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲ. ಸದಸ್ಯರು ಮಹಾಸಭೆಗೆ ಬರುವಾಗ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ.

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ

## 2017-18ನೇ ಸಾಲಿನ ವಾರ್ಷಿಕ ವರದಿ

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ನಮ್ಮ ಬ್ಯಾಂಕಿನ 57ನೇ ವರ್ಷದ ಈ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, 2017-18 ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮಂಡಿಸಲು ಹರ್ಷಿಸುತ್ತೇವೆ. ನಮ್ಮ ಬ್ಯಾಂಕು ಈ ವರ್ಷವೂ ಠೇವಣಿ ಸಂಗ್ರಹಣೆ, ಸಾಲ ನೀಡುವಿಕೆಯಲ್ಲಿ, ದುಡಿಯುವ ಬಂಡವಾಳ, ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಸಂತೋಷ ಪಡುತ್ತೇವೆ.

**ಆರ್ಥಿಕ ಪ್ರಗತಿ :** (ರೂ. ಕೋಟಿಗಳಲ್ಲಿ)

| ವಿವರಗಳು | 31-03-2018 ರೂ. | 31-03-2017 ರೂ. | ಹೆಚ್ಚುವರಿಯಾದದ್ದು ರೂ. | ಶೇಕಡಾವಾರು ಪ್ರಮಾಣ % |
|---|---|---|---|---|
| ದುಡಿಯುವ ಬಂಡವಾಳ | 346.78 | 320.18 | 26.60 | 8.31 % |
| ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು | 41.71 | 39.43 | 2.28 | 5.78 % |
| ಠೇವಣಿಗಳು | 289.06 | 263.64 | 25.42 | 9.64 % |
| ಸಾಲಗಳು | 191.34 | 165.24 | 26.10 | 15.80 % |
| ಲಾಭ (ತೆರಿಗೆ ಹಾಗೂ ಇತರೆ ಅವಕಾಶ ಕಲ್ಪಿಸುವ ಮೊದಲು) | 5.80 | 5.77 | 0.03 | 0.52 % |

**1. ದುಡಿಯುವ ಬಂಡವಾಳ:**

ಹಣಕಾಸು ವರ್ಷದ ಪ್ರಾರಂಭದಲ್ಲಿ ದುಡಿಯುವ ಬಂಡವಾಳ ರೂ.320.18 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ.346.78 ಕೋಟಿ ಆಗಿ ರೂ.26.60 ಕೋಟಿ ಹೆಚ್ಚಿಗೆಯಾಗಿರುತ್ತದೆ.

**2. ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು :**

ವರ್ಷದ ಪ್ರಾರಂಭದಲ್ಲಿ ನಿಧಿಗಳ ಮೊತ್ತವು ರೂ.39.43 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ.41.71 ಕೋಟಿ ಆಗಿ, ವರದಿ ಸಾಲಿನಲ್ಲಿ ರೂ.2.28 ಕೋಟಿ ಹೆಚ್ಚಿಗೆಯಾಗಿರುತ್ತದೆ. ಇದರಿಂದಾಗಿ ಬ್ಯಾಂಕು ತನ್ನ ಸ್ವಂತ ನಿಧಿಗಳನ್ನು ಹೆಚ್ಚಿಸಿಕೊಂಡಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

**3. ಠೇವಣಿಗಳು:**

ಬ್ಯಾಂಕಿನ ಮೇಲೆ ಸಾರ್ವಜನಿಕರು ಮತ್ತು ಸದಸ್ಯರು ಇರಿಸಿದ ಅಪಾರ ವಿಶ್ವಾಸ ಹಾಗೂ ಬ್ಯಾಂಕು ತನ್ನ ಗ್ರಾಹಕರಿಗೆ ನೀಡುತ್ತಿರುವ ಸೇವೆಗಳಿಂದಾಗಿ, ಕಳೆದ ವರ್ಷದ ಪ್ರಾರಂಭದಲ್ಲಿದ್ದ ರೂ.263.64 ಕೋಟಿ ಠೇವಣಿಗಳು, ವರ್ಷಾಂತ್ಯಕ್ಕೆ ರೂ.289.06 ಕೋಟಿ ಆಗಿ, ರೂ. 25.42 ಕೋಟಿ ಹೆಚ್ಚಿಗೆಯಾಗಿರುತ್ತದೆ.

### ಶಾಖಾವಾರು ಠೇವಣಿಗಳ ವಿವರಗಳು

(ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2018 | 31-03-2017 | ಹೆಚ್ಚಿಗೆ/ಕಡಿಮೆ |
|---|---|---|---|
| ಪ್ರಧಾನ ಕಛೇರಿ | 108.10 | 99.23 | 8.87 |
| ಚೌಕಿಪೇಟೆ | 60.51 | 52.33 | 8.18 |
| ನರಸರಾಜ ರಸ್ತೆ | 39.68 | 41.55 | − 1.87 |
| ಪಿ.ಜೆ. ಬಡಾವಣೆ | 47.65 | 40.89 | 6.76 |
| ದೇ. ಅರಸ್ ಬಡಾವಣೆ | 24.92 | 23.90 | 1.02 |
| ಹೊನ್ನಾಳಿ | 8.20 | 5.74 | 2.46 |
| **ಒಟ್ಟು** | **289.06** | **263.64** | **25.42** |

4. **ಸಾಲ ಹಾಗೂ ಮುಂಗಡಗಳು:**

ಕಳೆದ ವರ್ಷದ ಕೊನೆಯಲ್ಲಿ ರೂ.165.24 ಕೋಟಿ ಇದ್ದ ಸಾಲಗಳು, ಈ ಸಾಲಿನ ಅಂತ್ಯಕ್ಕೆ ರೂ.191.34 ಕೋಟಿ ಆಗಿದ್ದು, ಹಿಂದಿನ ವರ್ಷಕ್ಕಿಂತ ರೂ. 26.10 ಕೋಟಿ ಹೆಚ್ಚಿಗೆಯಾಗಿರುತ್ತದೆ.

**ಶಾಖಾವಾರು ಸಾಲಗಳ ವಿವರಗಳು** (ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2018 | 31-03-2017 | ಹೆಚ್ಚಿಗೆ/ಕಡಿಮೆ |
|---|---|---|---|
| ಪ್ರಧಾನ ಕಛೇರಿ | 89.45 | 73.47 | 15.98 |
| ಚೌಕಿಪೇಟೆ | 21.56 | 24.96 | -3.40 |
| ನರಸರಾಜ ರಸ್ತೆ | 26.08 | 25.76 | 0.32 |
| ಪಿ.ಜೆ. ಬಡಾವಣೆ | 25.57 | 18.24 | 7.33 |
| ದೇ. ಅರಸ್ ಬಡಾವಣೆ | 22.35 | 17.37 | 4.98 |
| ಹೊನ್ನಾಳಿ | 6.33 | 5.44 | 0.89 |
| **ಒಟ್ಟು** | **191.34** | **165.24** | **26.10** |

5. **ಷೇರು ಬಂಡವಾಳ:**

ಹಣಕಾಸು ವರ್ಷದ ಪ್ರಾರಂಭದಲ್ಲಿ ಷೇರು ಬಂಡವಾಳ ರೂ.8.70 ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ.9.25 ಕೋಟಿ ಆಗಿ ರೂ. 55 ಲಕ್ಷ ಹೆಚ್ಚಿಗೆಯಾಗಿರುತ್ತದೆ.

6. **ಸದಸ್ಯತ್ವ:**

ವರ್ಷದ ಪ್ರಾರಂಭದಲ್ಲಿದ್ದ ಬ್ಯಾಂಕಿನ ಸದಸ್ಯರ ಸಂಖ್ಯೆ 15148 ಪ್ರಸಕ್ತ ಸಾಲಿನಲ್ಲಿ ಹೊಸದಾಗಿ 295 ಜನ ಸದಸ್ಯತ್ವ ಪಡೆದಿದ್ದು, 218 ಜನ ಸದಸ್ಯತ್ವ ಹಿಂದಕ್ಕೆ ಪಡೆದಿದ್ದಾರೆ. ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ 15225.

7. **ಬ್ಯಾಂಕಿನ ಹೂಡಿಕೆಗಳು / ಸಂಚಯಗಳು:**

ರಿಸರ್ವ್ ಬ್ಯಾಂಕಿನ ಸುತ್ತೋಲೆ ಪ್ರಕಾರ ಹೂಡಿಕೆಗಳನ್ನು ಸರ್ಕಾರದ ಭದ್ರತೆಗಳಲ್ಲಿ, ವಿವಿಧ ಬ್ಯಾಂಕುಗಳ ಖಾಯಂ ಠೇವಣಿಗಳಲ್ಲಿ ಹಾಗೂ ಇತರೆ ಹಣಕಾಸು ಸಂಸ್ಥೆಗಳಲ್ಲಿ ಲಾಭದಾಯಕವಾಗಿ ತೊಡಗಣೆ ಮಾಡಿದ್ದು, ಸಾಲಾಖೈರಿಗೆ ರೂ.130.66 ಕೋಟಿ ತೊಡಗಣೆ ಮಾಡಲಾಗಿದೆ. ಹೂಡಿಕೆಗಳಿಂದ ಬ್ಯಾಂಕಿಗೆ ರೂ.9.95 ಕೋಟಿ ಆದಾಯ ಬಂದಿರುತ್ತದೆ.

8. **ಸಾಲ ವಸೂಲಾತಿ ಮತ್ತು ಅನುತ್ಪಾದನಾ ಆಸ್ತಿ ಪ್ರಮಾಣ:**

ಪ್ರಸಕ್ತ ಹಣಕಾಸು ವರ್ಷದಲ್ಲಿ ಯೋಜನಾಬದ್ದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಸತತ ಪ್ರಯತ್ನದಿಂದ ಅನುತ್ಪಾದಕ ಸಾಲಗಳ ಮತ್ತು ಕಟ್ಟು ಬಾಕಿ ಸಾಲಗಳ ವಸೂಲಾತಿ ಕಾರ್ಯವನ್ನು ನಿರಂತರವಾಗಿ ನಡೆಸಿದ್ದರಿಂದ ಅನುತ್ಪಾದಕ ಸಾಲಗಳ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಲು ಸಾದ್ಯವಾಗಿದ್ದು ಬ್ಯಾಂಕಿನ ಪ್ರಶಂಸಾರ್ಹ ಪ್ರಗತಿಗೆ ಕಾರಣವಾಗಿದೆ. ಕಟ್ಟುಬಾಕಿ ಪ್ರಮಾಣ ಶೇಕಡ 3.06 ರಷ್ಟಿದ್ದು ಬ್ಯಾಂಕು ಸತತವಾಗಿ 0% ನಿವ್ವಳ ಎನ್.ಪಿ.ಎ. (ಅನುತ್ಪಾದಕ ಆಸ್ತಿ) ಹೊಂದಿರುವುದು ಹೆಮ್ಮೆಯ ವಿಷಯವಾಗಿದೆ.

9. **ಲಾಭ:** ವರದಿ ಸಾಲಿನಲ್ಲಿ ಬ್ಯಾಂಕು ರೂ.5,80,04,299-96 ಲಾಭ ಗಳಿಸಿದ್ದು, ಶಾಖಾವಾರು ಲಾಭಗಳ ವಿವರ ಈ ಕೆಳಕಂಡಂತಿದೆ.

## ಶಾಖಾವಾರು ಲಾಭಗಳ ವಿವರಗಳು

(ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2018 | 31-03-2017 | ಹೆಚ್ಚಿಗೆ/ಕಡಿಮೆ |
|---|---|---|---|
| ಪ್ರಧಾನ ಕಛೇರಿ | 2.26 | 1.90 | 0.36 |
| ಚೌಕಿಪೇಟೆ | 1.36 | 1.64 | –0.28 |
| ನರಸರಾಜ ರಸ್ತೆ | 1.09 | 1.27 | –0.18 |
| ಪಿ.ಜೆ. ಬಡಾವಣೆ | 0.45 | 0.30 | 0.15 |
| ದೇ. ಅರಸ್ ಬಡಾವಣೆ | 0.48 | 0.51 | –0.03 |
| ಹೊನ್ನಾಳಿ | 0.16 | 0.15 | 0.01 |
| **ಒಟ್ಟು** | **5.80** | **5.77** | **0.03** |

ವರದಿ ಸಾಲಿನಲ್ಲಿ ಬ್ಯಾಂಕು ರೂ.5,80,04,299–96 ಲಾಭ ಗಳಿಸಿದ್ದು, ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಯಲ್ಲಿ ತೋರಿಸಿರುವಂತೆ ಅವಕಾಶ ಕಲ್ಪಿಸಲಾಗಿದೆ.

10. **2017–18ನೇ ಸಾಲಿನ ಲಾಭ ವಿಭಾಗಣೆ :** ಬ್ಯಾಂಕು ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ ರೂ.2,94,94,779–96 ನಿವ್ವಳ ಲಾಭ ಗಳಿಸಿದೆ. ತಮ್ಮೆಲ್ಲರ ಒಪ್ಪಿಗೆ ಪಡೆದು ಲಾಭವನ್ನು ಈ ಕೆಳಕಾಣಿಸಿದಂತೆ ವಿಲೇವಾರಿ ಮಾಡಲು ಕಾರ್ಯಕಾರಿ ಮಂಡಲಿ ನಿರ್ಣಯಿಸಿದೆ.

| ಕ್ರ.ಸಂ | ನಿಧಿಗಳು | 31-03-2018ಕ್ಕೆ ಇದ್ದಂತೆ | ಲಾಭ ವಿಭಾಗಣೆ | ಲಾಭ ವಿಭಾಗಣೆ ನಂತರ ನಿಧಿಗಳು |
|---|---|---|---|---|
| 1 | ಮೀಸಲು ನಿಧಿ ಶೇ 30 ರಂತೆ | 16,51,79,771–36 | 88,48,500–96 | 17,40,28,272–32 |
| 2 | ಸಹಕಾರ ಶಿಕ್ಷಣ ನಿಧಿಗೆ ಶೇ. 2 ರಂತೆ * | – | 4,12,930–00 | – |
| 3 | ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಕ್ಕೆ ಶೇ. 1ರಂತೆ * | – | 2,06,465–00 | – |
| 4 | ಸದಸ್ಯರ ಷೇರಿನ ಮೇಲೆ ಡಿವಿಡೆಂಡ್ ಶೇ.12 ರಂತೆ * | – | 1,08,00,000–00 | – |
| 5 | ಕರಡು ಸಾಲದ ನಿಧಿಗೆ | 9,98,00,000–00 | 30,00,000–00 | 10,28,00,000–00 |
| 6 | ಕಟ್ಟಡ ನಿಧಿಗೆ | 4,10,00,000–00 | 20,00,000–00 | 4,30,00,000–00 |
| 7 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,40,00,000–00 | 10,00,000–00 | 3,50,00,000–00 |
| 8 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 1,37,00,000–00 | 13,00,000–00 | 1,50,00,000–00 |
| 9 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 9,51,000–00 | 5,00,000–00 | 14,51,000–00 |
| 10 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತೆ | 75,00,000–00 | – | 75,00,000–00 |
| 11 | ಸಿಬ್ಬಂದಿ ಸೌಕರ್ಯ ನಿಧಿ | 1,14,32,076–75 | 2,00,000–00 | 1,16,32,076–75 |
| 12 | ಸಾರ್ವಜನಿಕ ಒಳಿತು ನಿಧಿ | 12,00,000–00 | 1,00,000–00 | 13,00,000–00 |
| 13 | ಧರ್ಮ ನಿಧಿ | 1,75,440–23 | 26,884–00 | 2,02,324–23 |
| 14 | ಲಾಭಾಂಶ ಸಮನ್ವಯ ನಿಧಿ | 46,00,000–00 | – | 46,00,000–00 |
| 15 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆಕ್ಷನ್ 36(1)) | 3,73,77,411–00 | – | 3,73,77,411–00 |
| 16 | ಜುಬಿಲಿ ನಿಧಿ | 1,50,000–00 | 1,00,000–00 | 2,50,000–00 |
| 17 | ಸಿಬ್ಬಂದಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ* | | 10,00,000–00 | |
| | **ಒಟ್ಟು** | **41,70,65,699–34** | **2,94,94,779–96** | **43,41,41,084–30** |

* ಪಾವತಿಸಬೇಕಾದ ಬಾಬ್ತುಗಳು

**11. ಆಯ-ವ್ಯಯ :**
2018-19ನೇ ಸಾಲಿನ ಅಂದಾಜು ಆಯವ್ಯಯವನ್ನು ಮಹಾಸಭೆಯ ಮಂಜೂರಾತಿಗಾಗಿ ಮಂಡಿಸಲಾಗಿದೆ.

**12. ಡಿವಿಡೆಂಡ್ :**
ಸದಸ್ಯರ ಷೇರು ಹಣದ ಮೇಲೆ ಶೇಕಡ 12 ರಂತೆ ಡಿವಿಡೆಂಡನ್ನು ವಾರ್ಷಿಕ ಮಹಾಸಭೆಯ ಅನುಮತಿ ಪಡೆದು ಹಂಚಲು ತೀರ್ಮಾನಿಸಲಾಗಿದೆ.

**13. ಲೆಕ್ಕಪರಿಶೋಧನೆ:**
2017-18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಶ್ರೀ ಎಸ್. ಎಸ್. ಹುರಕಡ್ಲಿ, ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ ಇವರು ಪರಿಶೋಧನೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಬ್ಯಾಂಕು ಈ ವರ್ಷವೂ ಸಹ "ಎ" ಆಡಿಟ್ ವರ್ಗದಲ್ಲಿ ಮುಂದುವರೆದಿದೆ.

**14. ಕಾರ್ಯನಿರ್ವಾಹಕ ಸಮಿತಿ ಸಭೆಗಳು :**
ಈ ವರ್ಷದಲ್ಲಿ ಒಟ್ಟು 13 ಕಾರ್ಯನಿರ್ವಾಹಕ ಮಂಡಲಿಯ ಸಭೆಗಳು, 15 ಉಪಸಮಿತಿ ಸಭೆಗಳು ನಡೆದು, ಈ ಸಭೆಗಳಲ್ಲಿ ಎಲ್ಲಾ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿರುತ್ತಾರೆ.

**15.** 2018-19ನೇ ಸಾಲಿಗೆ ಬ್ಯಾಂಕು ರೂ.747 ಕೋಟಿಯವರೆಗೂ ಬಾಹ್ಯ ಮೂಲಗಳಿಂದ ಸಾಲಗಳನ್ನು ಪಡೆಯಲು ಅವಕಾಶವಿರುತ್ತದೆ.

**16. 2018-19ನೇ ಸಾಲಿಗೆ ಉದ್ದೇಶಿಸಿರುವ ಕಾರ್ಯಕ್ರಮಗಳು:**

- ❖ ದಾವಣಗೆರೆ ನಗರದಲ್ಲಿ ನೂತನ ಶಾಖೆಯನ್ನು ಪ್ರಾರಂಭಿಸುವುದು.
- ❖ ಠೇವಣಾತಿಗಳನ್ನು ಮತ್ತು ಸಾಲಗಳನ್ನು ಹೆಚ್ಚಿಸಿ ಬ್ಯಾಂಕಿನ ಪ್ರಗತಿಯನ್ನು ಕಾಯ್ದುಕೊಳ್ಳುವುದು.
- ❖ ಗ್ರಾಸ್ ಎನ್.ಪಿ.ಎ. ಪ್ರಮಾಣವನ್ನು ಕಡಿಮೆ ಮಾಡುವುದು.
- ❖ IMPS / ಆಧಾರ್ ಬ್ಯಾಂಕಿಂಗ್ (AEBPS) / ಇಂಟರ್‌ನೆಟ್ ಬ್ಯಾಂಕಿಂಗ್ ಮತ್ತು ಅವಶ್ಯವಿರುವ ಆಧುನಿಕ ಡಿಜಿಟಲೀಕರಣಗಳನ್ನು ಅಳವಡಿಸಿಕೊಳ್ಳುವುದು.

**ಕೃತಜ್ಞತೆಗಳು ಹಾಗೂ ಅಭಿನಂದನೆಗಳು:**

ನಮ್ಮ ಬ್ಯಾಂಕಿನ ಪ್ರಗತಿಗೆ ಸಹಕರಿಸಿದ ಮಾನ್ಯ ಸದಸ್ಯರಿಗೆ, ಗ್ರಾಹಕರಿಗೆ, ಠೇವಣಿದಾರರಿಗೆ, ಅವಿರತವಾಗಿ ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ, ಲಕ್ಷ್ಮೀ ಠೇವಣಿ ಸಂಗ್ರಹಕಾರರಿಗೂ ಬ್ಯಾಂಕಿನ ಪ್ರಗತಿಯ ಸಾಧನೆಗೆ ಸೂಕ್ತ ಮಾರ್ಗದರ್ಶನ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಿರುವ ರಿಸರ್ವ್ ಬ್ಯಾಂಕ್ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಇಲಾಖಾ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಮತ್ತು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ, ಇವರಿಗೂ, ಲೆಕ್ಕ ಪರಿಶೋಧನಾ ಇಲಾಖೆಯವರಿಗೂ, ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆ ಮಾಡಿದ ಮೆ॥ ಬೆಳಗಾವಿ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ ಹಾಗೂ ಸಕಾಲದಲ್ಲಿ ಬ್ಯಾಂಕಿನ ಶಾಸನ ಬದ್ಧ ಲೆಕ್ಕ ಪರಿಶೋಧನೆ ಮಾಡಿದ ಚಾರ್ಟರ್ಡ್ ಅಕೌಂಟೆಂಟ್‌ರಾದ ಶ್ರೀ ಎಸ್ .ಎಸ್. ಹುರಕಡ್ಲಿ, ದಾವಣಗೆರೆ ಇವರಿಗೂ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನವರಿಗೂ ಹಾಗೂ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ, ಬೆಂಗಳೂರು, ಸಾಲ ವಸೂಲಾತಿಯಲ್ಲಿ ಸಹಕರಿಸಿದ ಮಾರಾಟಾಧಿಕಾರಿಗಳಾದ ಶ್ರೀಮತಿ ಹೆಚ್.ಆರ್. ಉಷ ಇವರಿಗೂ, ಕಾನೂನು ಸಲಹೆ ನೀಡುತ್ತಿರುವ ವಕೀಲರುಗಳಿಗೂ, ಬ್ಯಾಂಕಿಗೆ ಆಧಾರ ಮಾಡುವ ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡುತ್ತಿರುವ ಇಂಜಿನಿಯರ್‌ಗಳಿಗೂ, ಚಿನ್ನಾಭರಣಗಳ ಮೌಲ್ಯಮಾಪನ ಮಾಡುತ್ತಿರುವ ಮೌಲ್ಯಮಾಪಕರಿಗೂ, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದವರಿಗೂ, ಜಿಲ್ಲಾ ಸಹಕಾರ ಯೂನಿಯನ್, ದಾವಣಗೆರೆ. ಇವರಿಗೂ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ನಮ್ಮ ಬ್ಯಾಂಕಿನ ಮಾಜಿ ಕಾರ್ಯದರ್ಶಿಗಳು, ಮಾಜಿ ನಿರ್ದೇಶಕರು ಮತ್ತು ಹಿರಿಯ ಹೆಸರಾಂತ ವಕೀಲರಾಗಿದ್ದ ಶ್ರೀ ಎ.ಎಸ್. ಬಸಂತ್‌ರವರು ಮತ್ತು ಮಾಜಿ ನಿರ್ದೇಶಕರಾಗಿದ್ದ ಶ್ರೀ ಆರ್. ಮಹೇಂದ್ರರವರು ಹಾಗೂ ನಮ್ಮ ಬ್ಯಾಂಕಿನ ನಿವೃತ್ತ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಂ. ಬಸವರಾಜ್‌ರವರು ದೈವಾಧೀನರಾಗಿದ್ದು ನಮಗೆ ತುಂಬಲಾರದ ನಷ್ಟವಾಗಿದೆ. ದಯಾಮಯನಾದ ಭಗವಂತನು ಅವರುಗಳ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರುಗಳ ಕುಟುಂಬ ವರ್ಗಕ್ಕೆ ದುಃಖಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ವರದಿ ಸಾಲಿನಲ್ಲಿ ನಮ್ಮ ಬ್ಯಾಂಕಿನ ವ್ಯವಸ್ಥಾಪಕರಾಗಿದ್ದ ಶ್ರೀ ಹೆಚ್. ಬಸಪ್ಪನವರು, ಹಿರಿಯ ಸಹಾಯಕರಾಗಿದ್ದ ಶ್ರೀ ಜಿ. ಪಿ. ತಿಳುವಳ್ಳಿಯವರು ಉತ್ತಮ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದು ಅವರು ಬ್ಯಾಂಕಿಗೆ ಸಲ್ಲಿಸಿದ ಸೇವೆಯು ಗಮನಾರ್ಹವಾಗಿರುತ್ತದೆ. ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾದ ಎಲ್ಲರಿಗೂ ನಮ್ಮ ಅನಂತ ಧನ್ಯವಾದಗಳು.

ಕಾರ್ಯನಿರ್ವಾಹಕ ಮಂಡಲಿ ಪರವಾಗಿ

B.C. Umapathy

(ಬಿ.ಸಿ. ಉಮಾಪತಿ)
ಅಧ್ಯಕ್ಷರು

## 2017–18 ನೇ ಸಾಲಿನ ಆಯ–ವ್ಯಯಕ್ಕಿಂತ ಹೆಚ್ಚುವರಿ ಆದ ಖರ್ಚು ಮತ್ತು 2018–19 ನೇ ಸಾಲಿನ ಅಂದಾಜು ಆಯ–ವ್ಯಯ ಪತ್ರಿಕೆ

| ಕ್ರ. ಸಂ. | ವಿವರಗಳು | 2017–18ರ ಮಂಜೂರಾದ ಬಡ್ಜೆಟ್ | 2017–18 ರ ಖರ್ಚು ಆದದ್ದು | ಹೆಚ್ಚುವರಿಯಾದ ಖರ್ಚು | 2018–19 ನೇ ಸಾಲಿನ ಅಂದಾಜು | |
|---|---|---|---|---|---|---|
| | | | | | ಖರ್ಚು ರೂ. | ಆದಾಯ ರೂ. |
| 1 | ಸಿಬ್ಬಂದಿ ಸಂಬಳ, ಭವಿಷ್ಯ ನಿಧಿ ಮತ್ತು ಇತರೆ | 3,00,00,000–00 | 3,33,12,383–00 | 33,12,383–00 | 4,25,00,000–00 | |
| 2 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹಿರಾತು | 5,00,000–00 | 1,16,744–80 | | 5,00,000–00 | |
| 3 | ಬಾಡಿಗೆ, ಕಂದಾಯ, ವಿದ್ಯುತ್ ಮತ್ತು ವಿಮೆ | 1,25,00,000–00 | 1,26,59,980–49 | 1,59,980–49 | 70,00,000–00 | |
| 4 | ಅಂಚೆ, ತಂತಿ ಮತ್ತು ದೂರವಾಣಿ | 5,00,000–00 | 2,01,204–88 | | 5,00,000–00 | |
| 5 | ಪ್ರವಾಸ ಭತ್ಯೆ | 1,00,000–00 | 23,415–00 | | 1,00,000–00 | |
| 6 | ವಾರ್ಷಿಕ ಮಹಾಸಭೆಯ ವೆಚ್ಚ | 7,00,000–00 | 7,30,802–40 | 30,802–40 | 12,00,000–00 | |
| 7 | ನಿರ್ದೇಶಕರ ಸಭೆಯ ವೆಚ್ಚ | 2,00,000–00 | 1,38,500–00 | | 2,00,000–00 | |
| 8 | ತನಿಖಾ ಶುಲ್ಕ ಮತ್ತು ಮಾರಾಟಾಧಿಕಾರಿಯವರ ವೇತನ | 14,00,000–00 | 11,84,713–00 | | 14,00,000–00 | |
| 9 | ಬಡ್ಡಿ ಮತ್ತು ಕಮೀಷನ್ | 18,00,00,000–00 | 19,77,90,176–34 | 1,77,90,176–34 | 20,65,00,000–00 | 23,50,00,000–00 |
| 10 | ಚಂದಾ ವಗೈರೆ | 1,00,000–00 | 74,110–00 | | 1,00,000–00 | |
| 11 | ನವೀಕರಣ ಮತ್ತು ದುರಸ್ತಿ | 5,00,000–00 | 2,71,508–41 | | 5,00,000–00 | |
| 12 | ಸವಕಳಿ | 50,00,000–00 | 45,12,655–08 | | 50,00,000–00 | |
| 13 | ಕಾನೂನು ಸಲಹೆ ವೆಚ್ಚ | 5,00,000–00 | 1,48,650–00 | | 5,00,000–00 | |
| 14 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮೀಷನ್ | 35,00,000–00 | 33,32,566–00 | | 35,00,000–00 | |
| 15 | ಇತರೆ | 25,00,000–00 | 29,03,993–43 | 4,03,993–43 | 35,00,000–00 | 40,00,000–00 |
| 16 | ಕಂಪ್ಯೂಟರ್ ಮತ್ತು ಜೆರಾಕ್ಸ್ ನಿರ್ವಹಣೆ | 20,00,000–00 | 18,03,223–50 | | 20,00,000–00 | |
| 17 | ಗುಂತಾಯಿಸಿದ ಹಣದ ಮೇಲಿನ ಆದಾಯ | – | – | | – | |
| 18 | ಆದಾಯ | 4,50,00,000–00 | 5,80,04,299–96 | | 5,50,00,000–00 | 9,10,00,000–00 |
| | **ಒಟ್ಟು** | **28,50,00,000–00** | **29,55,63,549–14** | **2,16,97,335–66** | **33,00,00,000–00** | **33,00,00,000–00** |

## ದಿ ದಾವಣಗೆರೆ ಅರ್ಬನ್ ಕೋ–

ದಿನಾಂಕ: 31–03–2018 ಕ್ಕೆ ಇದ್ದಂತೆ

| 31–03–2017 ರೂ. ಪೈ. | ಖರ್ಚು | | 31–03–2018 ರೂ. ಪೈ. |
|---|---|---|---|
| 17,90,43,425–90 | ಠೇವಣಿಗಳ ಮತ್ತು ತಂದ ಸಾಲಗಳ ಮೇಲೆ ಕೊಟ್ಟ ಬಡ್ಡಿ | | 19,77,90,176–34 |
| 2,75,45,017–00 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಇತರೆ | | 3,33,12,383–00 |
| 1,32,500–00 | ಆಡಳಿತ ಮಂಡಲಿಯ ಸದಸ್ಯರುಗಳ ಭತ್ಯೆ | | 1,38,500–00 |
| 1,23,16,413–47 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | | 1,26,59,980–49 |
| 2,61,275–00 | ಕಾನೂನು ಖರ್ಚುಗಳು | | 1,48,650–00 |
| 2,21,867–58 | ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | | 2,01,204–88 |
| 9,54,441–00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ಸಂಬಳ | | 11,84,713–00 |
| 46,34,969–23 | ಆಸ್ತಿಗಳ ಮೇಲೆ ಸವಕಳಿ ಮತ್ತು ದುರಸ್ತಿ ಖರ್ಚು | | 47,84,163–49 |
| 4,37,417–83 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹಿರಾತು | | 1,16,744–80 |
| 33,15,805–00 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮೀಷನ್ | | 33,32,566–00 |
| 6,06,118–00 | ವಾರ್ಷಿಕ ಮಹಾಸಭೆಯ ಖರ್ಚು | | 7,30,802–40 |
| 38,01,965–00 | ಸಿಬ್ಬಂದಿಗೆ ಎಕ್ಸ್‌ಗ್ರೇಷಿಯ ಅವಕಾಶ | | 0–00 |
| 45,53,190–60 | ಇತರೆ ಖರ್ಚುಗಳು | | 48,04,741–93 |
| **5,77,39,143–53** | **ಲಾಭ** (ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳಿಗೆ ವಜಾ ಮಾಡುವ ಮೊದಲು) | | **5,80,04,299–96** |
| **29,55,63,549–14** | **ಜುಮ್ಲಾ** | | **31,72,08,926–29** |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| | 1. ಆದಾಯ ತೆರಿಗೆಗೆ ಅವಕಾಶ | 1,65,00,000–00 | |
| | 2. ಕರಡು ಸಾಲದ ನಿಧಿಗೆ - Sec36(1)(Viia) | 41,00,000–00 | |
| | 3. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ - Sec36(1)(Viii) | 20,00,000–00 | |
| | 4. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾಧ್ಯತೆ ನಿಧಿ | 10,00,000–00 | |
| | 5. ಆಡಿಟ್ ಫೀ ಪಾವತಿಸಬೇಕಾದದ್ದು | 3,50,000–00 | |
| 2,67,00,000–00 | 6. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 45,59,520–00 | 2,85,09,520–00 |
| **3,10,39,143–53** | **ನಿವ್ವಳ ಲಾಭ** | | **2,94,94,779–96** |
| **5,77,39,143–53** | **ಜುಮ್ಲಾ** | | **5,80,04,299–96** |

**ಡಿ. ವಿ. ಆರಾಧ್ಯಮಠ್**
ಪ್ರಧಾನ ವ್ಯವಸ್ಥಾಪಕರು

**ಕೋಗುಂಡಿ ಬಕ್ಕೇಶಪ್ಪ**
ಉಪಾಧ್ಯಕ್ಷರು

**ಬಿ.ಸಿ. ಉಮಾಪತಿ**
ಅಧ್ಯಕ್ಷರು

ಕಾರ್ಯನಿರ್ವಾಹಕ ಮಂಡಲಿ ಸದಸ್ಯರು :

**ಮುಂಡಾಸ್ ವೀರೇಂದ್ರ**
ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು

**ಹೆಚ್.ಎಂ. ರುದ್ರಮುನಿಸ್ವಾಮಿ**
ನಿರ್ದೇಶಕರು

**ಶ್ರೀಮತಿ ಸುರೇಖ ಎಂ. ಚಿಗಟೇರಿ**
ನಿರ್ದೇಶಕರು

# ಆಪ್. ಬ್ಯಾಂಕ್ ಲಿ., ದಾವಣಗೆರೆ

## ಲಾಭ – ಹಾನಿ ಪತ್ರಿಕೆ

| 31–03–2017<br>ರೂ. ಪೈ. | ಆದಾಯ | 31–03–2018<br>ರೂ. ಪೈ. |
|---|---|---|
| 17,79,83,198–60<br>10,63,05,132–59<br>1,12,75,217–95 | ಸಾಲ ಮತ್ತು ಮುಂಗಡಗಳ ಮೇಲೆ ಬಂದ ಬಡ್ಡಿ<br>ವಿನಿಯೋಗಗಳ ಮೇಲೆ ಬಂದ ಆದಾಯ<br>ಇತರೆ ಜಮಾಗಳು | 21,36,97,588–52<br>9,95,33,561–10<br>39,77,776–67 |
| **29,55,63,549–14** | **ಜುಮ್ಲಾ** | **31,72,08,926–29** |
| 5,77,39,143–53 | ಲಾಭ ಮೇಲೆ ಬಂದಂತೆ | 5,80,04,299–96 |
| **5,77,39,143–53** | **ಜುಮ್ಲಾ** | **5,80,04,299–96** |

ಸಹಿ/–
**ಎಸ್.ಎಸ್. ಹುರಕಡ್ಲಿ**
ಚಾರ್ಟರ್ಡ್ ಅಕೌಂಟೆಂಟ್
ಎಂ.ನಂ. 032400
ಮಾಲೀಕರು
ಮೆ॥ ಹುರಕಡ್ಲಿ ಮತ್ತು ಕಂ. ದಾವಣಗೆರೆ.
ಎಫ್ ಆರ್.ನಂ. 013077S

ದಿನಾಂಕ : 30–07–2018
ಸ್ಥಳ : ದಾವಣಗೆರೆ

## ದಿ ದಾವಣಗೆರೆ ಅರ್ಬನ್ ಕೋ–

### ದಿನಾಂಕ: 31–03–2018 ಕ್ಕೆ ಇದ್ದಂತೆ

| 31–03–2017 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31–03–2018 ರೂ. ಪೈ. |
|---|---|---|---|
| **8,69,88,450–00** | **ಷೇರು ಬಂಡವಾಳ** | | **9,24,80,800–00** |
| | ವ್ಯಕ್ತಿಗತ ಮತ್ತು ಪಾಲುದಾರಿಕೆ ಸಂಸ್ಥೆಗಳಿಂದ | | |
| | ರೂ.100 ಮೌಲ್ಯದ 924808 ಷೇರುಗಳು | | |
| **39,43,02,043–81** | **ಆಪದ್ದನ ಮತ್ತು ಇತರೆ ನಿಧಿಗಳು** | | **41,70,65,699–34** |
| **38,13,79,943–83** | | **40,31,57,182–36** | |
| 13,52,02,532–83 | ಆಪದ್ಧನ ನಿಧಿ | 16,51,79,771–36 | |
| 3,70,00,000–00 | ಕಟ್ಟಡ ನಿಧಿ | 4,10,00,000–00 | |
| 45,00,000–00 | ಲಾಭಾಂಶ ಸಮನ್ವಯ ನಿಧಿ | 46,00,000–00 | |
| 11,80,00,000–00 | ಕರಡು ಸಾಲದ ನಿಧಿ | 9,98,00,000–00 | |
| 3,32,77,411–00 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆಕ್ಷನ್ (36(1)) | 3,73,77,411–00 | |
| 3,38,00,000–00 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,40,00,000–00 | |
| 1,31,00,000–00 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 1,37,00,000–00 | |
| 65,00,000–00 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 75,00,000–00 | |
| **1,29,22,099–98** | **ಇತರೆ ನಿಧಿಗಳು ಮತ್ತು ಕಾಯ್ದಿರಿಸಿದ ನಿಧಿಗಳು** | **1,39,08,516–98** | |
| 1,08,96,515–75 | ಸಿಬ್ಬಂದಿ ಸೌಕರ್ಯನಿಧಿ | 1,14,32,076–75 | |
| 10,00,000–00 | ಸಾರ್ವಜನಿಕ ಒಳಿತು ನಿಧಿ | 12,00,000–00 | |
| 1,80,584–23 | ಧರ್ಮನಿಧಿ | 1,75,440–23 | |
| 7,95,000–00 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 9,51,000–00 | |
| 50,000–00 | ಜೂಬಿಲಿ ನಿಧಿ | 1,50,000–00 | |
| **263,63,84,086–69** | **ಠೇವಣಿಗಳು ಮತ್ತು ಇತರೆ ಖಾತೆಗಳು** | | **289,05,92,794–35** |
| **190,77,51,664–92** | **ಖಾಯಂ ಠೇವಣಿಗಳು** | **218,63,33,671–37** | |
| 189,91,61,981–92 | ವ್ಯಕ್ತಿಗಳಿಂದ | 216,49,77,175–37 | |
| 85,89,683–00 | ಇತರೆ ಸಂಸ್ಥೆಗಳಿಂದ | 2,13,56,496–00 | |
| **51,62,83,427–52** | **ಉಳಿತಾಯ ಠೇವಣಿಗಳು** | **51,11,99,485–47** | |
| 51,56,03,832–32 | ವ್ಯಕ್ತಿಗಳಿಂದ | 51,09,68,895–27 | |
| 6,79,595–20 | ಇತರೆ ಸಂಸ್ಥೆಗಳಿಂದ | 2,30,590–20 | |
| **20,86,47,346–51** | **ಚಾಲ್ತಿ ಠೇವಣಿಗಳು** | **18,97,10,848–22** | |
| 20,43,87,791–12 | ವ್ಯಕ್ತಿಗಳಿಂದ | 18,48,51,818–54 | |
| 42,59,555–39 | ಇತರೆ ಸಂಘಗಳಿಂದ | 48,59,029–68 | |
| **37,01,647–74** | **ಇತರೆ ಠೇವಣಿಗಳು** | **33,48,789–29** | |
| 37,01,647–74 | ವಾಯಿದೆ ಮೀರಿದ ಠೇವಣಿ | 33,48,789–29 | |
| 0–00 | **ಪಡೆದ ಸಾಲಗಳು** | | 0–00 |
| – | ಅಲ್ಪಾವಧಿ ಸಾಲಗಳು | – | |
| – | ಮಧ್ಯಮಾವಧಿ ಸಾಲಗಳು | – | |
| **26,038–00** | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು** | | **62,311–00** |
| **1,16,63,129–00** | **ಶಾಖೆಗಳ ಹೊಂದಾಣಿಕೆ** | | **14,613–00** |
| **8,60,42,365–47** | **ಕಟ್ಟುಬಾಕಿ ಬಡ್ಡಿ ಮೀಸಲು** | | **8,12,08,733–01** |
| **31,71,375–00** | **ಕೊಡಬೇಕಾದ ಬಡ್ಡಿ** | | **28,33,459–89** |
| **321,85,77,487–97** | **ಮುಂದಿನ ಪುಟಕ್ಕೆ** | | **348,42,58,410–59** |

## ಆಪ್. ಬ್ಯಾಂಕ್ ಲಿ., ದಾವಣಗೆರೆ

### ಅಢಾವೆ ಪತ್ರಿಕೆ

| 31-03-2017 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2018 ರೂ. ಪೈ. |
|---|---|---|---|
| **23,10,26,682-80** | **ನಗದು ಮತ್ತು ಬ್ಯಾಂಕಿನಲ್ಲಿರುವ ಶಿಲ್ಕು** | | **29,99,10,240-81** |
| 4,65,28,700-00 | ಬ್ಯಾಂಕಿನಲ್ಲಿರುವ ನಗದು | 4,80,24,291-00 | |
| | ಎಸ್.ಬಿ.ಐ ಮತ್ತು ಇತರೆ ಸಮವರ್ತಿ ಬ್ಯಾಂಕುಗಳಲ್ಲಿ ಹಾಗೂ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ | | |
| 2,70,54,778-80 | ಚಾಲ್ತಿ ಖಾತೆ | 6,44,42,745-81 | |
| 15,74,43,204-00 | ಖಾಯಂ ಠೇವಣಿ | 18,74,43,204-00 | |
| **47,58,93,491-19** | **ಇತರೆ ಬ್ಯಾಂಕಿನಲ್ಲಿ ಶಿಲ್ಕು** | | **27,42,09,626-12** |
| 6,88,68,491-19 | ಚಾಲ್ತಿ ಖಾತೆ | 6,71,84,626-12 | |
| 40,70,25,000-00 | ಖಾಯಂ ಠೇವಣಿ | 20,70,25,000-00 | |
| 0-00 | ಕಾಲ್‌ಮನಿ ಹೂಡಿಕೆ | | 0-00 |
| **76,35,18,836-00** | **ಸಂಚಯಗಳು** | | **91,21,08,349-00** |
| 66,33,16,336-00 | ಕೇಂದ್ರ/ರಾಜ್ಯ ಸರ್ಕಾರದ ಭದ್ರತಾ ಪತ್ರಗಳು | 71,19,05,849-00 | |
| 66,33,16,336-00 | ಪುಸ್ತಕ ಬೆಲೆ | 71,19,05,849-00 | |
| 66,00,00,000-00 | ಮುಖಬೆಲೆ | 71,00,00,000-00 | |
| 65,81,92,336-00 | ಮಾರುಕಟ್ಟೆ ಬೆಲೆ | 70,15,40,849-00 | |
| 2,02,500-00 | ಸಹಕಾರಿ ಸಂಘಗಳ ಷೇರುಗಳು | 2,02,500-00 | |
| 10,00,00,000-00 | ಇತರೆ | 20,00,00,000-00 | |
| **165,24,22,932-44** | **ಸಾಲಗಳು** | | **191,34,24,247-30** |
| **81,60,07,817-09** | ಅಲ್ಪಾವಧಿ ಸಾಲಗಳು ರೋಖ ಪತ್ರಗಳು ಓವರ್ ಡ್ರಾಫ್ಟ್‌ಗಳು | **89,73,46,812-77** | |
| 80,45,64,394-75 | ಬಿಲ್ಲುಗಳು ಸೋಡಿ ಅವುಗಳಲ್ಲಿ ವಾಸ್ತವಿಕ ಭದ್ರತೆಗಳ ಮೇಲೆ | 88,64,88,812-77 | |
| 81,60,07,817-09 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 89,73,46,812-77 | |
| 2,99,21,538-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 3,34,49,589-00 | |
| **43,79,62,741-00** | **ಮಧ್ಯಮಾವಧಿ ಸಾಲಗಳು** | **54,54,01,016-58** | |
| 43,79,62,741-00 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 54,54,01,016-58 | |
| 43,79,62,741-00 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 54,54,01,016-58 | |
| 31,98,438-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 70,72,943-00 | |
| **39,84,52,374-35** | **ದೀರ್ಘಾವಧಿ ಸಾಲಗಳು** | **47,06,76,417-95** | |
| 39,84,52,374-35 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 47,06,76,417-95 | |
| 39,84,52,374-35 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 47,06,76,417-95 | |
| 1,92,76,324-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 1,79,82,276-00 | |
| **312,28,61,942-43** | **ಮುಂದಿನ ಪುಟಕ್ಕೆ** | | **339,96,52,463-23** |

## ದಿ ದಾವಣಗೆರೆ ಅರ್ಬನ್ ಕೋ –

**ದಿನಾಂಕ: 31–03–2018 ಕ್ಕೆ ಇದ್ದಂತೆ**

| 31–03–2017 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31–03–2018 ರೂ. ಪೈ. |
|---|---|---|---|
| **321,85,77,487–97** | **ಹಿಂದಿನ ಪುಟದಿಂದ** | | **348,42,58,410–59** |
| **3,82,94,796–40** | **ಇತರೆ ಜವಾಬ್ದಾರಿಗಳು** | | **3,52,94,117–19** |
| 66,70,163–91 | ಪಾವತಿಯಾಗಬೇಕಾಗಿದ್ದ ಹುಂಡಿಗಳು | 33,95,346–71 | |
| 25,99,936–00 | ಪಡೆಯದಿರುವ ಲಾಭಾಂಶ | 25,28,413–00 | |
| 12,76,156–49 | ಸಂಡ್ರಿ ಬಾಬ್ತುಗಳು | 13,01,795–60 | |
| 2,43,203–00 | ಸಹಕಾರಿ ಅಭಿವೃದ್ಧಿ ನಿಧಿ | 2,43,203–00 | |
| 2,50,000–00 | ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,50,000–00 | |
| 72,30,019–00 | ಆದಾಯ ತೆರಿಗೆ ಅವಕಾಶ | 37,30,019–00 | |
| 38,01,965–00 | ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 45,59,520–00 | |
| 1,19,17,000–00 | ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | 1,39,17,000–00 | |
| 24,28,000–00 | ಲಾಕರ್ ಬಾಡಿಗೆ ಮುಂಗಡ ಠೇವಣಿ | 29,000–00 | |
| 16,440–00 | ಬಿಲ್ಸ್ ಫಾರ್ ಕಲೆಕ್ಷನ್ | 18,640–70 | |
| 18,61,913–00 | ಟಿ.ಡಿ.ಎಸ್. ಪೇಯಬಲ್ | 27,90,965–00 | |
| 0–00 | ಸರಕು ಸೇವಾ ತೆರಿಗೆ | 4,30,214–18 | |
| 0–00 | ಸಿಬ್ಬಂದಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ | 20,00,000–00 | |
| **3,10,39,143–53** | **ಲಾಭ–ನಷ್ಟ ಖಾತೆ** | | **2,94,94,779–96** |
| | ಕಳೆದ ವರ್ಷದ ಅಢಾವೆ ಪತ್ರಿಕೆ ಲಾಭ | 3,10,39,143–53 | |
| | ವಿನಿಯೋಗಿಸಿದ್ದು | 3,10,39,143–53 | |
| | ಈ ಸಾಲಿನ ನಿವ್ವಳ ಲಾಭ | **2,94,94,779–96** | |
| | **ಷರಾ : ಈ ಸಾಲಿನಲ್ಲಿ ಗಳಿಸಿದ ಲಾಭ** | **5,80,04,299–96** | |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| | 1. ಆದಾಯ ತೆರಿಗೆಗೆ ಅವಕಾಶ | 1,65,00,000–00 | |
| | 2. ಕರಡು ಸಾಲದ ನಿಧಿಗೆ - Sec36(1)(Viia) | 41,00,000–00 | |
| | 3. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ - Sec36(1)(Viii) | 20,00,000–00 | |
| | 4. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾಧ್ಯತೆ ನಿಧಿ | 10,00,000–00 | |
| | 5. ಆಡಿಟ್ ಫೀ ಪಾವತಿಸಬೇಕಾದದ್ದು | 3,50,000–00 | |
| | 6. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 45,59,520–00 | |
| | | **2,85,09,520–00** | |
| | ನಿವ್ವಳ ಲಾಭ | **2,94,94,779–96** | |
| **328,79,11,427–90** | **ಜುಮ್ಲಾ** | | **354,90,47,307–74** |
| **32,59,569–99** | **ಘಟನಾಪೇಕ್ಷ ಬಾಧ್ಯತೆಗಳು** | | **16,75,569–99** |
| | ಸ್ವೀಕಾರ, ಸಮ್ಮತಿ ಲೇಖ ಮತ್ತು ಇತರೆ ಜವಾಬ್ದಾರಿಗಳು | | |
| 32,59,569–99 | ಆಧಾರ ಸಹಿತ | 16,75,569–99 | |
| 0–00 | ಆಧಾರ ರಹಿತ | 0–00 | |

# ಆಪ್. ಬ್ಯಾಂಕ್ ಲಿ., ದಾವಣಗೆರೆ

## ಅಢಾವೆ ಪತ್ರಿಕೆ

| 31-03-2017 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2018 ರೂ. ಪೈ. |
|---|---|---|---|
| **312,28,61,942-43** | **ಹಿಂದಿನ ಪುಟದಿಂದ** | | **339,96,52,463-23** |
| **26,038-00** | ವಸೂಲಾಗತಕ್ಕ ಮತ್ತು ವಸೂಲಿಗೆ ಕಳಿಸಿರುವ ಬಿಲ್ಲುಗಳು | | **62,311-00** |
| **2,10,36,400-00** | ಕಟ್ಟಡಗಳು (ಸವಕಳಿ ತೆಗೆದು) | | **1,89,98,660-00** |
| **96,94,200-00** | ಪೀಠೋಪಕರಣಗಳು ಮತ್ತು ಮುಟ್ಟುಗಳು | | **88,53,600-00** |
| **8,60,42,365-47** | ಬರಬೇಕಾದ ಬಡ್ಡಿ | | **8,12,08,733-01** |
| **0-00** | ಶಾಖೆಗಳ ಹೊಂದಾಣಿಕೆ | | **0-00** |
| **4,82,50,482-00** | **ಇತರೆ ಆಸ್ತಿಗಳು** | | **4,02,71,540-50** |
| 4,04,410-00 | ಗಣಕ ಯಂತ್ರಗಳು (ಕಂಪ್ಯೂಟರ್) | 21,33,490-00 | |
| 18,11,670-00 | ಮುಂಗಡ ಖಾತೆ | 11,06,480-00 | |
| 20,380-00 | ದೂರವಾಣಿ ಖಾತೆ | 19,880-00 | |
| 5,40,156-00 | ಆದಾಯ ತೆರಿಗೆ (ಟಿ.ಡಿ.ಎಸ್.) | 5,38,564-00 | |
| 3,66,78,739-00 | ತೊಡಗಣೆ ಮೇಲೆ ಬರಬೇಕಾದ ಬಡ್ಡಿ | 2,73,16,610-00 | |
| 41,000-00 | ಜೆರಾಕ್ಸ್ ಯಂತ್ರ | 34,800-00 | |
| 15,81,099-00 | ಮುದ್ರಣ ಮತ್ತು ಲೇಖನ ಸಾಮಗ್ರಿಗಳ ದಾಸ್ತಾನು | 28,40,588-50 | |
| 1,68,680-00 | ಕೆ.ಇ.ಬಿ. ಠೇವಣಿ | 1,68,680-00 | |
| 51,84,740-00 | ಮುಂಗಡ ಆದಾಯ ತೆರಿಗೆ | 51,84,740-00 | |
| 10,32,200-00 | ಯಂತ್ರೋಪಕರಣ | 8,77,200-00 | |
| 50,708-00 | ಇ- ಸ್ಟಾಂಪ್ ಠೇವಣಿ ಮತ್ತು ಮುಂಗಡ | 50,508-00 | |
| 7,36,700-00 | ಕಂಪ್ಯೂಟರ್ ತಂತ್ರಾಂಶ | 0-00 | |
| **328,79,11,427-90** | **ಜುಮ್ಲಾ** | | **354,90,47,307-74** |
| **32,59,569-99** | **ಸಾದಿಲ್ವಾರು ಜವಾಬ್ದಾರಿ** | | **16,75,569-99** |
| | ಸಂಘಟಕ ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ | | |
| 32,59,569-99 | ಆಧಾರ ಸಹಿತ | 16,75,569-99 | |
| 0-00 | ಆಧಾರ ರಹಿತ | 0-00 | |

# ದಿ ದಾವಣಗೆರೆ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ದಾವಣಗೆರೆ

## ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಆಸ್ತಿ–ಜವಾಬ್ದಾರಿ ತಃಖ್ತೆಗಳಿಗೆ ತೋರಿಸಿದ ಅಂಶಗಳ ಬಗ್ಗೆ ಟಿಪ್ಪಣಿಗಳು

1. ದಿನಾಂಕ 31–03–2018ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡ 16.60 ರಷ್ಟು ಇರುವುದು.
2. ತೊಡಗಣೆಗಳ ಮುಖಬೆಲೆ ಪುಸ್ತಕಬೆಲೆ ಮತ್ತು ಮಾರುಕಟ್ಟೆ ಬೆಲೆಗಳನ್ನು ಅಥಾವೆ ಪತ್ರಿಕೆಯಲ್ಲಿ ನಮೂದಿಸಿದೆ.
3. (ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲವನ್ನು ಕೊಟ್ಟಿರುವುದಿಲ್ಲ.
   (ಆ) ಗೃಹನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಸಾಲವು ರೂ. 2065.38 ಲಕ್ಷ ಇರುತ್ತದೆ.
4. ಷೇರು, ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.
5. (ಅ) ಬ್ಯಾಂಕಿನ ನಿರ್ದೇಶಕ ಮಂಡಲಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಠೇವಣಿಗಳ ಆಧಾರದ ಮೇಲೆ ನೀಡಿರುವ ಸಾಲದ ಒಟ್ಟು ಮೊತ್ತವು ದಿನಾಂಕ 31–03–2018 ರಂದು ರೂ.28.12 ಲಕ್ಷ ಇರುತ್ತದೆ.
   (ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಆಧಾರ ರಹಿತ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.
6. 2017–18 ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಬಡ್ಡಿಯ ವೆಚ್ಚವು ಶೇಕಡಾ 7.32ರಷ್ಟು ಇದೆ.
7. ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಶೇಕಡವಾರು | ಮೊಬಲಗು | ಶೇಕಡವಾರು |
| 31–03–2018 | 515.53 | 2.69 % | –856.24 | 0.00 % |
| 31–03–2017 | 578.01 | 3.50 % | –934.76 | 0.00 % |
| ವ್ಯತ್ಯಾಸ | –62.48 | –0.81 % | –78.52 | 0.00 % |

8. 2017–18ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿದೆ.
   - ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 9.03 ಇರುತ್ತದೆ.
   - ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 0.11 ಇರುತ್ತದೆ.
   - ಬ್ಯಾಂಕಿನ ಒಟ್ಟು ಗಳಿಕೆಯು ದುಡಿಯುವ ಬಂಡವಾಳದ ಮೇಲೆ ಶೇಕಡಾ 1.67 ಇರುತ್ತದೆ.
   - ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ 0.85 ಇರುತ್ತದೆ.
   - ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ.667.22 ಲಕ್ಷ ಇರುತ್ತದೆ.
   - ನಿವ್ವಳ ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ.4.10 ಲಕ್ಷ ಇದೆ.
9. ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಮ್‌ನ್ನು ದಿನಾಂಕ 18–05–2017 ಮತ್ತು 23–11–2017 ರಂದು ಒಟ್ಟು ರೂ.31.15 ಲಕ್ಷ. ಡಿಪಾಜಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.
10. ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ರೂ.16.76 ಲಕ್ಷಗಳಿಗೆ ಬ್ಯಾಂಕ್ ಖಾತರಿ (Bank Guarantee) ಯನ್ನು ಕೊಟ್ಟಿರುತ್ತದೆ.
11. ಎನ್.ಪಿ.ಎ.:– ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗು ಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | ಗುಂತಾಯಗಳ ಸವಕಳಿ ನಿಧಿ |
|---|---|---|---|
| 31–03–2018 | 1371.77 | 75.00 | 340.00 |
| 31–03–2017 | 1512.77 | 65.00 | 338.00 |
| ವ್ಯತ್ಯಾಸ | 141.00 | 10.00 | 2.00 |

12. ಡೆಫ್ ಖಾತೆಗೆ ವರ್ಗಾವಣೆಯಾಗಿರುವ ಮೊತ್ತ ರೂ. 62.39 ಲಕ್ಷ.

ಡಿ.ವಿ. ಆರಾಧ್ಯಮಠ್
ಪ್ರಧಾನ ವ್ಯವಸ್ಥಾಪಕರು

ಮುಂಡಾಸ್ ವೀರೇಂದ್ರ
ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು

ಹೆಚ್.ಎಂ. ರುದ್ರಮುನಿಸ್ವಾಮಿ
ನಿರ್ದೇಶಕರು

ಶ್ರೀಮತಿ ಸುರೇಖ ಎಂ. ಚಿಗಟೇರಿ
ನಿರ್ದೇಶಕರು

ಕೋಗುಂಡಿ ಬಕ್ಕೇಶಪ್ಪ
ಉಪಾಧ್ಯಕ್ಷರು

ಬಿ.ಸಿ. ಉಮಾಪತಿ
ಅಧ್ಯಕ್ಷರು

## ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ

ನಾನು ದಿ ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು ಆರು ಶಾಖೆಗಳ (ಕ್ರೋಢೀಕೃತ) 2017–18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರದ ಪುಸ್ತಕಗಳು ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನನ್ನ ತಿಳುವಳಿಕೆ ನಂಬಿಕೆ ಮೇರೆಗೆ ಇದರ ಜೊತೆಗೆ ಲಗತ್ತಿಸಿರುವ ಆಸ್ತಿ–ಜವಾಬ್ದಾರಿ ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಯು ದಿನಾಂಕ: 31–03–2018ಕ್ಕೆ ಇದ್ದಂತೆ ನನ್ನ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

ಸಹಿ/–
ಎಸ್. ಎಸ್. ಹುರಕಡ್ಲಿ
ಚಾರ್ಟರ್ಡ್ ಅಕೌಂಟೆಂಟ್
ಎಂ.ನಂ. 032400
ಮಾಲೀಕರು
ಮೆ|| ಹುರಕಡ್ಲಿ ಮತ್ತು ಕಂ. ದಾವಣಗೆರೆ.
ಎಫ್ ಆರ್.ನಂ. 013077S

ದಿನಾಂಕ : 30–07–2018
ಸ್ಥಳ : ದಾವಣಗೆರೆ

## ಉಪವಿಧಿಗಳ ತಿದ್ದುಪಡಿ

| ಉಪವಿಧಿ | ಹಾಲಿ ಇರುವ ಉಪವಿಧಿ | ಉಪವಿಧಿ | ಸೂಚಿಸಿರುವ ತಿದ್ದುಪಡಿ |
|---|---|---|---|
| 35(3) | ನಾಮಮಾತ್ರ ಸದಸ್ಯತ್ವ ಕೋರುವ ಅರ್ಜಿ ನಿಗಧಿಗೊಳಿಸಿರುವ ನಮೂನೆಯಲ್ಲಿರತಕ್ಕದ್ದು ಮತ್ತು ಆ ಅಭ್ಯರ್ಥಿಯು ಅರ್ಜಿಯಲ್ಲಿ ಸಹಿ ಹಾಕಿ ಶುಲ್ಕ 50/– ರೂಪಾಯಿಗಳನ್ನು ಪಾವತಿ ಮಾಡಿರತಕ್ಕದ್ದು. | 35(3) | ನಾಮಮಾತ್ರ ಸದಸ್ಯತ್ವ ಕೋರುವ ಅರ್ಜಿ ನಿಗದಿಗೊಳಿಸಿರುವ ನಮೂನೆಯಲ್ಲಿರತಕ್ಕದ್ದು ಮತ್ತು ಆ ಅಭ್ಯರ್ಥಿಯು ಅರ್ಜಿಯಲ್ಲಿ ಸಹಿ ಹಾಕಿ ಶುಲ್ಕ 100/– ರೂಪಾಯಿಗಳನ್ನು ಪಾವತಿ ಮಾಡಿರತಕ್ಕದ್ದು. |

**ತಿದ್ದುಪಡಿಗೆ ಕಾರಣ :** ಬ್ಯಾಂಕಿನ ಮೀಸಲು ನಿಧಿಯನ್ನು (ರಿಸರ್ವ್ ಫಂಡ್) ಹೆಚ್ಚಿಸಲು ತಿದ್ದುಪಡಿಯನ್ನು ಪ್ರಸ್ತಾಪಿಸಿದೆ.

| ಉಪವಿಧಿ | ಹಾಲಿ ಇರುವ ಉಪವಿಧಿ | ಉಪವಿಧಿ | ಸೂಚಿಸಿರುವ ತಿದ್ದುಪಡಿ |
|---|---|---|---|
| 60(3)6 | ಹೊಸ ಸೇರ್ಪಡೆ | 60(3)6 | ಬ್ಯಾಂಕಿನ ಯಾವುದೇ ಒಬ್ಬ ಅಧಿಕಾರಿ / ನೌಕರನಿಗೆ ಯಾವುದೇ ರೀತಿಯ ಸೂಚನೆ ಅಥವಾ ನಿರ್ದೇಶನ ಕೊಡತಕ್ಕದ್ದಲ್ಲ. ಆದಾಗ್ಯೂ ಯಾವುದೇ ಅರ್ಜಿ ಅಥವಾ ಪ್ರಸ್ತಾವವು ಬಾಕಿ ಇದ್ದಲ್ಲಿ ಅದರ ಪ್ರಸಕ್ತ ವಸ್ತುಸ್ಥಿತಿಯ ಬಗ್ಗೆ ಮುಖ್ಯಕಾರ್ಯನಿರ್ವಾಹಕನಿಂದ ಅಗತ್ಯ ಮಾಹಿತಿ ಪಡೆಯಬಹುದು; |
| 63(8) | **ವರ್ಗಾವಣೆ ಮತ್ತು ಪದೋನ್ನತಿ :**<br>(ಅ) ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕೇಡರ್ (Cadre) ಮತ್ತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹನಾಗ ತಕ್ಕದ್ದು; ಪರಂತು, ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯದ ಬಗ್ಗೆ ಕೆಳಗಿನ ಸಂಸ್ಥೆಗಳು ನಡೆಸುವ ಅಲ್ಪಾವಧಿ ತರಬೇತಿ ಕೋರ್ಸನ್ನು ಸಮರ್ಪಕವಾಗಿ ಪೂರ್ಣಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ: ಪ್ರಾಂತೀಯ ಸಹಕಾರ ವ್ಯವಸ್ಥಾಪನಾ ಸಂಸ್ಥೆ, ಬೆಂಗಳೂರು ಅಥವಾ ವೈಕುಂಠ ಮೆಹತಾ ಸಹಕಾರಿ ವ್ಯವಸ್ಥಾಪನಾ ಸಂಸ್ಥೆ, ಪುಣೆ ಅಥವಾ ರಿಜರ್ವ ಬ್ಯಾಂಕಿನ ಕೃಷಿ ಬ್ಯಾಂಕಿಂಗ್ ಕಾಲೇಜು, ಪುಣೆ ಮತ್ತು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು. ಬ್ಯಾಂಕಿನ ಆಡಳಿತ ಮಂಡಳಿಯು ಪ್ರತಿ ನೌಕರನನ್ನು ಮೇಲಿನ ಸಂಸ್ಥೆಗಳು ನಡೆಸುವ ತರಬೇತಿ ಕಾರ್ಯಕ್ರಮಗಳಿಗೆ ಕನಿಷ್ಠ ಮೂರು ವರ್ಷಕ್ಕೊಮ್ಮೆ ನಿಯೋಜಿಸತಕ್ಕದ್ದು. ಮತ್ತು ತರಬೇತಿಯ ಕಾರ್ಯಕ್ರಮಕ್ಕೆ ಹಾಜರಾಗದ ಯಾವುದೇ ನೌಕರನಿಗೆ ವಾರ್ಷಿಕ ವೇತನ ಹೆಚ್ಚಳವನ್ನು ಮಂಜೂರು ಮಾಡತಕ್ಕದಲ್ಲ. | 63(8) | **ವರ್ಗಾವಣೆ ಮತ್ತು ಪದೋನ್ನತಿ :**<br>ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕೇಡರ್ ಮತ್ತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹನಾಗತಕ್ಕದ್ದು; ಪರಂತು, ಜುಲೈ 29, 2019ರ ನಂತರ ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾವುದಾದರೊಂದು ವಿಷಯದ ಬಗ್ಗೆ ಡಿಪ್ಲೋಮಾವನ್ನು ಮಾನ್ಯತೆ ಪಡೆದ ಸಂಸ್ಥೆಯಿಂದ ಸಮರ್ಪಕವಾಗಿ ಪೂರ್ಣ ಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ: ಸಹಕಾರಿ ನಿರ್ವಹಣೆಯಲ್ಲಿ ಹೆಚ್ಚಿನ ಡಿಪ್ಲೊಮಾ (ಹೆಚ್.ಡಿ.ಸಿ.ಎಮ್), ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೊಮಾ (ಡಿ.ಸಿ.ಬಿ.ಎಮ್) ಪಟ್ಟಣ ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೊಮಾ (ಡಿ.ಯು.ಸಿ.ಬಿ.ಎಮ್) ಸಹಕಾರ ನಿರ್ವಹಣೆಯಲ್ಲಿ ಸಾಮಾನ್ಯ ಡಿಪ್ಲೊಮಾ (ಜಿಡಿಸಿ) ಸಹಕಾರದಲ್ಲಿ ಡಿಪ್ಲೊಮಾ (ಡಿಸಿಎಮ್) ಮತ್ತು ಬ್ಯಾಂಕಿನ ಆಡಳಿತ ಮಂಡಲಿಯು ಪ್ರತಿ ನೌಕರನನ್ನು ಮೇಲಿನ ತರಬೇತಿಗೆ ನಿಯೋಜಿಸತಕ್ಕದ್ದು. ಆಡಳಿತ ಮಂಡಲಿಯು ತರಬೇತಿಗೆ ಹಾಜರಾಗಲು ಮತ್ತು ಪೂರ್ಣಗೊಳಿಸಲು ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ. |

**ತಿದ್ದುಪಡಿಗೆ ಕಾರಣ :** ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ತಿದ್ದುಪಡಿಗೆ ಅನು ಗುಣವಾಗಿ ತಿದ್ದುಪಡಿ ಪ್ರಸ್ತಾಪಿಸಿದೆ.

| ಉಪವಿಧಿ | ಹಾಲಿ ಇರುವ ಉಪವಿಧಿ | ಉಪವಿಧಿ | ಸೂಚಿಸಿರುವ ತಿದ್ದುಪಡಿ | |
|---|---|---|---|---|
| 63(15)4 | **ದಂಡನೆಗಳು**<br>**ಸಿಬ್ಬಂದಿ ಶಿಸ್ತು ನಿಯಮಾವಳಿಗಳು**<br>**ಹೊಸ ಸೇರ್ಪಡೆ** | 63(15)4 | **ಸಿಬ್ಬಂದಿ ಶಿಸ್ತು ನಿಯಮಾವಳಿಗಳು**<br>**1.) ಕರ್ತವ್ಯ ದುರ್ನಡತೆ / ಕರ್ತವ್ಯ ಲೋಪ :**<br>ಈ ಕೆಳಕಾಣಿಸಿದ ಕರ್ತವ್ಯಲೋಪಗಳನ್ನು ನೌಕರನ ದುರ್ವರ್ತನೆ / ಕರ್ತವ್ಯ ದುರ್ನಡತೆ ಎಂದು ಪರಿಗಣಿಸಲ್ಪಡುತ್ತದೆ.<br>1. ಉನ್ನತ ಅಧಿಕಾರಿಗಳಿಗೆ ಉದ್ದೇಶ ಪೂರ್ವಕ ಅವಿಧೇಯತೆಯಿಂದ ವರ್ತಿಸುವುದು, ಉನ್ನತ ಅಧಿಕಾರಿಗಳ ಕಾನೂನು ಸಮ್ಮತವಾದ ಮತ್ತು ವಿವೇಚನಾ ಪೂರ್ವಕವಾದ ಆದೇಶವನ್ನು ಉಲ್ಲಂಘಿಸುವುದು.<br>2. ಉದ್ದೇಶ ಪೂರ್ವಕವಾಗಿ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರಿಸುವುದು, ಇತರೆಯವರಿಗೆ ದುರ್ಬೋದಿಸುವುದು ಅಥವಾ ಪ್ರೇರೇಪಿಸುವುದು ಮುಂತಾದವು ಗಳು.<br>3. ಬ್ಯಾಂಕಿನ ವ್ಯವಹಾರಗಳಲ್ಲಿ ಆಸ್ತಿಗಳಲ್ಲಿ ಮತ್ತು ಇತರ ಯಾವುದೇ ಕರ್ತವ್ಯದಲ್ಲಿ ಕಳ್ಳತನ, ಮೋಸ ವಂಚನೆ, ಹಣ ದುರುಪಯೋಗ ಮಾಡುವುದು ಅಥವಾ ಅಪ್ರಮಾಣಿಕತೆಯಿಂದ ನಡೆದು ಕೊಳ್ಳುವುದು.<br>4. ಅನಧಿಕೃತ ಗೈರುಹಾಜರಿಯಾಗುವುದು/ ಸಕಾರಣಗಳಿಲ್ಲದೆ ಸೂಕ್ತವಾದ ಮತ್ತು ಸಮರ್ಪಕವಾದ ವಿವರಣೆ ಇಲ್ಲದೆ ಮಂಜೂರಾದ ರಜೆ ಅವಧಿಗಿಂತ ಮೀರಿ ರಜೆಯಲ್ಲಿ ಇರುವುದು/ಮುಂದುವರೆಯುವುದು.<br>5. ದುರ್ವರ್ತನೆ ಮತ್ತು ಒಳ್ಳೆಯ ನಡತೆಯನ್ನು ಬುಡಮೇಲು ಮಾಡುವ, ಜೂಜಾಡುವ ವರ್ತನೆಯನ್ನು ಒಳಗೊಂಡಂತೆ ಯಾವುದೇ ಕೃತ್ಯವೆಸಗುವುದು.<br>6. ಕಾರ್ಯನಿರ್ವಹಣೆಯಲ್ಲಿ ಉದ್ದೇಶ ಪೂರ್ವಕವಾಗಿ ವಸ್ತುವನ್ನು ಹಾಳುಮಾಡುವ ಅಥವಾ ಬ್ಯಾಂಕಿನ ಯಾವುದೇ ಆಸ್ತಿಗೆ ಧಕ್ಕೆ ತರುವಂತೆ ವರ್ತಿಸುವುದು.<br>7. ಕರ್ತವ್ಯದಲ್ಲಿ ನಿರ್ಲಕ್ಷತೆಯಿಂದ ವರ್ತಿಸುತ್ತಾ ಅಲಕ್ಷೆ ಮಾಡುವ ವಾಡಿಕೆಯನ್ನು/ಪರಿಪಾಠವನ್ನು ಇಟ್ಟುಕೊಳ್ಳುವುದು.<br>8. ನೌಕರರ ಕರ್ತವ್ಯ ನಿರ್ವಹಣೆಯಲ್ಲಿ ಅವನ ವಶದಲ್ಲಿರುವ ಸಂಘದ ಯಾವುದೇ ಮಾಹಿತಿಯನ್ನು ಅನಧೀಕೃತ ವ್ಯಕ್ತಿಗೆ ಪ್ರಕಾಶಗೊಳಿಸುವುದು/ನೀಡುವುದು, ಬಹಿರಂಗ ಪಡಿಸುವುದು.<br>9. ಬ್ಯಾಂಕಿನ ಆಡಳಿತ ಮಂಡಲಿಗೆ ಅಥವಾ ಹಿರಿಯ ಅಧಿಕಾರಿ ನೌಕರರಿಗೆ ಉದ್ಯೋಗ ನಿರ್ವಹಣೆ ಯಲ್ಲಿ ಅಶ್ಲೀಲವಾಗಿ / ದುರ್ವಾಚ್ಯ ಶಬ್ದಗಳಿಂದ ಕೂಡಿದ ಮಾತುಗಳನ್ನು ನುಡಿಯುವುದು ಮತ್ತು ಅಂತಹ ಕೃತ್ಯಗಳಲ್ಲಿ ತೊಡಗುವುದು. | **ತಿದ್ದುಪಡಿಗೆ ಕಾರಣ :** ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ತಿದ್ದುಪಡಿಗೆ ಅನು ಗುಣವಾಗಿ ತಿದ್ದುಪಡಿ ಪ್ರಸ್ತಾಪಿಸಿದೆ. |

| ಉಪವಿಧಿ | ಹಾಲಿ ಇರುವ ಉಪವಿಧಿ | ಉಪವಿಧಿ | ಸೂಚಿಸಿರುವ ತಿದ್ದುಪಡಿ | |
|---|---|---|---|---|
| | | | 10. ಇತರೆ ನೌಕರರಿಗೆ ಅವರ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರುವಂತೆ ಹುರಿದುಂಬಿಸುವುದು/ ಪ್ರಚೋದಿಸಿ ಚಂಚಲವಾಗುವಂತೆ ಪ್ರಚಾರವನ್ನು ಮಾಡುವುದು / ಘೋಷಣೆಗಳನ್ನು ಕೂಗುವುದು.<br>11. ಬ್ಯಾಂಕಿನ ನಿಯಮಗಳಿಗೆ ಅಗೌರವ ತೋರಿಸುವುದು, ಅಧಿಕಾರಿಯನ್ನು ಅಗೌರವ ದಿಂದ ಕಾಣುವುದು ಮತ್ತು ಆಡಳಿತ ಮಂಡಲಿಯ ಸದಸ್ಯರನ್ನು ಸಾಮಾನ್ಯವಾಗಿ ಅಪಮಾನ ಅವಮರ್ಯಾದೆ, ಅಪಪ್ರಚಾರ ಮುಖ ಭಂಗವಾಗುವಂತೆ ಮಾಡು ವುದು.<br>12. ನಡತೆ ಮತ್ತು ವರ್ತನೆಯಲ್ಲಿ ಉದ್ದಟತನ ತೋರುವುದು ಅಸಂಸ್ಕೃತವಾದ ಒರಟಾದ ಶಬ್ದಗಳನ್ನು ಉಪಯೋಗಿಸಿ ಮಾತನಾಡುವುದು.<br>**2) ಶಿಸ್ತು ಕ್ರಮಕ್ಕೆ ಒಳಪಡುವ ಪೂರ್ವದಲ್ಲಿ ಸಿಬ್ಬಂದಿಗೆ ನೋಟೀಸು :**<br>ಎ) ಶಿಸ್ತು ಪ್ರಾಧಿಕಾರಿ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಯು ಮೇಲಿನ ನಿಯಮದಂತೆ ಕರ್ತವ್ಯಲೋಪ /ಕರ್ತವ್ಯ ದುರ್ನಡತೆ ಸಂಬಂಧವಾಗಿ ಆರೋಪಗಳ ಕುರಿತು ಶಿಸ್ತು ಕ್ರಮಕ್ಕೆ ಒಳಪಡಿಸುವ ಪೂರ್ವದಲ್ಲಿ ನೌಕರನಿಗೆ ಶಿಸ್ತು ಕ್ರಮಕ್ಕೆ ಒಳಪಡುವ ಸಂಬಂಧ ಅವನು ಬಯಸಿದರೆ ವಿವರಣೆ ನೀಡಲು ಅವಕಾಶ ಮಾಡಿಕೊಟ್ಟು ನಿರ್ದಿಷ್ಟ ದಿನಾಂಕ ನಿಗಧಿಪಡಿಸಿ, ಲಿಖಿತವಾಗಿ ತಿಳುವಳಿಕೆ ನೀಡಿ ವಿವರಣೆಗೆ ಅವಕಾಶ ಕಲ್ಪಿಸಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ಅಥವಾ ಮುದ್ದಾಂ ಆಗಿ ಸೂಕ್ತ ಸ್ವೀಕೃತಿಯೊಂದಿಗೆ ನೀಡತಕ್ಕದ್ದು. ಸದರಿ ನೋಟೀಸನ್ನು ಅಂತಹ ನೌಕರನು ನಿರಾಕರಿಸಿದರೆ, ತೆಗೆದುಕೊಳ್ಳದೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಸದರಿ ನೋಟೀಸಿನ ಪ್ರತಿಯನ್ನು ಸಂಘದ ನೋಟೀಸ್ ಬೋರ್ಡ್ ಹಾಗೂ ಅಂತಹ ನೌಕರನ ಮನೆಯ ಮುಂಬಾಗಿಲಿಗೆ ಅಂಟಿಸುವ ಮೂಲಕ ಜಾರಿಗೊಳಿಸ ತಕ್ಕದ್ದು.<br>ಬಿ) ಶಿಸ್ತು ಕ್ರಮಕ್ಕೆ ಒಳಪಟ್ಟು ಸಿಬ್ಬಂದಿಯು ನೋಟೀಸಿಗೆ 7 ದಿನದ ಒಳಗಾಗಿ ವಿವರಣೆ ನೀಡತಕ್ಕದ್ದು. ಒಂದು ಪಕ್ಷ ವಿವರಣೆ ನೀಡದಿದ್ದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ಅಧಿಕಾರ ಶಿಸ್ತು ಪ್ರಾಧಿಕಾರಕ್ಕೆ ಇರುತ್ತದೆ. ವಿವರಣೆ ಸರಿ ಇದೆ ಎಂದು ಶಿಸ್ತು ಪ್ರಾಧಿಕಾರಕ್ಕೆ ಸಮಂಜಸವೆನಿಸಿ, ತೃಪ್ತಿಕರವಾಗಿದ್ದಲ್ಲಿ ಯಾವ ದಂಡನೆಯನ್ನು ವಿಧಿಸದೇ ಅಪಾದನೆಯಿಂದ ಮುಕ್ತಗೊಳಿಸಬಹುದಾಗಿದೆ.<br>**3). ಅಮಾನತ್ತು :**<br>1. ಮೇಲಿನ ನಿಯಮದಲ್ಲಿ ತಿಳಿಸಿದ ಕರ್ತವ್ಯಲೋಪ / ಕರ್ತವ್ಯ ದುರ್ವರ್ತನೆ ಆರೋಪದ ಹಿನ್ನೆಲೆಯಲ್ಲಿ ನೇಮಕಾತಿ ಪ್ರಾಧಿಕಾರದಿಂದ ಅಥವಾ ಅದರ ಅಧೀನದಲ್ಲಿರುವ ಯಾವುದೇ ಅಧಿಕಾರಿ ಅಥವಾ ನೇಮಕಾತಿ ಪ್ರಾಧಿಕಾರದಿಂದ ಪ್ರಾಧಿಕೃತನಾದ ಯಾವುದೇ ಅಧಿಕಾರಿಯು ಆ ನೌಕರನನ್ನು ವಿಚಾರಣಾ ಸಮಯದಲ್ಲಿ ಸೇವೆಯಿಂದ ಅಮಾನತ್ತುಗೊಳಿಸ ಬಹುದು. | **ತಿದ್ದುಪಡಿಗೆ ಕಾರಣ :** ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ತಿದ್ದುಪಡಿಗೆ ಅನು ಗುಣವಾಗಿ ತಿದ್ದುಪಡಿ ಪ್ರಸ್ತಾಪಿಸಿದೆ. |

| ಉಪವಿಧಿ | ಹಾಲಿ ಇರುವ ಉಪವಿಧಿ | ಉಪವಿಧಿ | ಸೂಚಿಸಿರುವ ತಿದ್ದುಪಡಿ | |
|---|---|---|---|---|
| | | | 2. ಈ ಕೆಳಕಂಡ ಸಂದರ್ಭಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ನೌಕರನು ಸೇವೆಯಿಂದ ಅಮಾನತ್ತುಗೊಂಡಿರುವನೆಂದು ಭಾವಿಸತಕ್ಕದ್ದು.<br>(ಎ) ಕ್ರಿಮಿನಲ್ ಆಪಾದನೆಯ ಮೇರೆಗೆ 48 ಗಂಟೆಗಳಿಗಿಂತ ಹೆಚ್ಚಿನ ಅವಧಿಗೆ ಕಾರಾ ಗೃಹದಲ್ಲಿ ಇರಿಸಿದ ದಿನಾಂಕದಿಂದ.<br>(ಬಿ) ಆ ನೌಕರನು ತಪ್ಪಿತಸ್ಥನೆಂದು ನ್ಯಾಯಾಲಯದಲ್ಲಿ ತೀರ್ಪು ಆದ ದಿನಾಂಕದಿಂದ 48 ಗಂಟೆಗಳ ಅವಧಿಗೂ ಮೀರಿ ಕಾರಾಗೃಹದಲ್ಲಿ ಬಂಧಿಯಾಗಿದ್ದರೆ ಆ ನೌಕರನನ್ನು ಸೇವಯಿಂದ ಅಮಾನತುಗೊಂಡಿರುವನೆಂದು ಭಾವಿಸತಕ್ಕದ್ದು. ತಪ್ಪಿತಸ್ಥನೆಂದು ತೀರ್ಮಾನವಾದ ನಂತರ ಆ ನೌಕರನನ್ನು ವಜಾ ಮಾಡುವುದು, ತೆಗೆದುಹಾಕುವುದು, ಕಡ್ಡಾಯ ನಿವೃತ್ತಿಗೊಳಿಸುವುದು ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದೆ ಇದ್ದ ಪಕ್ಷದಲ್ಲಿ ಆ ನೌಕರನ್ನು ಅಮಾನತ್ತಿಲ್ಲಿಡತಕ್ಕದ್ದು.<br>3. ನೌಕರನನ್ನು ಸೇವೆಯಿಂದ ಅಮಾನತ್ತುಗೊಳಿಸುವ ಸಂಬಂಧ ಅಥವಾ ಅಮಾನತ್ತುಗೊಂಡಿರುವನೆಂದು ಭಾವಿಸುವ ಆದೇಶವು ಅದನ್ನು ಸಕ್ಷಮ ಅಧಿಕಾರಿಯ ಮಾರ್ಪಡಿಸುವ ಅಥವಾ ಹಿಂದಕ್ಕೆ ಪಡೆಯುವವರೆಗೆ ಜಾರಿಯಲ್ಲಿರುತ್ತದೆ.<br>4. ನೌಕರನನ್ನು ಸೇವೆಯಿಂದ ಅಮಾನತ್ತುಗೊಳಿಸುವ ಸಕ್ಷಮ ಪ್ರಾಧಿಕಾರವು ಅಮಾನತ್ತು ಆದೇಶದ ದಿನಾಂಕದಿಂದ 6 ತಿಂಗಳೊಳಗೆ ಶಿಸ್ತು ವಿಚಾರಣೆ ಪೂರ್ಣವಾಗದೇ ಇದ್ದಾಗ, ಅಮಾನತ್ತಿನಲ್ಲಿರುವ ನೌಕರನ ಅಮಾನತ್ತು ಆದೇಶವನ್ನು ಮುಂದುವರೆಸುವ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳತಕ್ಕದ್ದು.<br>5. ಅಮಾನತ್ತುಗೊಂಡಿರುವ ನೌಕರನು ವೇತನ ಪಡೆಯಲು ಯಾವುದೇ ಕಾನೂನುದಾಯಕ ಹಕ್ಕುಹೊಂದಿರುವುದಿಲ್ಲ. ಆದರೆ ಅವನು ಜೀವನಾಧಾರ ಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.<br>**4) ಶಿಸ್ತು ವಿಚಾರಣೆ ಕ್ರಮ :**<br>1. ಬ್ಯಾಂಕಿನ ಯಾವುದೇ ನೌಕರನ ವಿರುದ್ಧ ಶಿಸ್ತು ಕ್ರಮಜರುಗಿಸಲು ಆಡಳಿತಮಂಡಲಿ ಅಥವಾ ಆಡಳಿತ ಮಂಡಲಿ ಸದಸ್ಯರನ್ನೊಳಗೊಂಡ ಸಮಿತಿ ಅಥವಾ ಆಡಳಿತ ಮಂಡಲಿಯಿಂದ ನೇಮಕಗೊಂಡ ಯಾವುದೇ ನಿವೃತ್ತ ನ್ಯಾಯಾಧೀಶರು ಅಥವಾ ಹಿರಿಯ ನ್ಯಾಯವಾದಿ ಅಥವಾ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ನಿವೃತ್ತ ಅಧಿಕಾರಿ ಶಿಸ್ತು ವಿಚಾರಣೆಯನ್ನು ನಡೆಸಲು ಅಧಿಕಾರ ಹೊಂದಿರುತ್ತಾರೆ. | **ತಿದ್ದುಪಡಿಗೆ ಕಾರಣ :** ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ತಿದ್ದುಪಡಿಗೆ ಅನು ಗುಣವಾಗಿ ತಿದ್ದುಪಡಿ ಸೂಚಿಸಿದೆ. |

| ಉಪವಿಧಿ | ಹಾಲಿ ಇರುವ ಉಪವಿಧಿ | ಉಪವಿಧಿ | ಸೂಚಿಸಿರುವ ತಿದ್ದುಪಡಿ |
|---|---|---|---|
| | | | 2. ಕರ್ತವ್ಯಲೋಪ ಮತ್ತು ಕರ್ತವ್ಯ ದುರ್ನಡತೆ, ಅನುಚಿತ ವರ್ತನೆ ಆಧಾರದ ಮೇಲೆ ನೌಕರನಿಗೆ ನೀಡಲಾಗಿರುವ ಆರೋಪ ಪಟ್ಟಿ, ಆರೋಪಗಳ ಸಂಗತಿ, ದಾಖಲಾತಿಗಳು ಮತ್ತು ಸಾಕ್ಷಿಗಳ ವಿವರಣೆಯನ್ನೊಳಗೊಂಡ ಮಾಹಿತಿಯೊಂದಿಗೆ ನೀಡಲಾದ ನೋಟೀಸಿಗೆ ನೌಕರನು ನೀಡುವ ವಿವರಣೆಗೆ ಆಧಾರವಾಗಿ ಅಂತಹ ನೌಕರನಿಗೆ ದಾಖಲಾತಿಗಳನ್ನು ಪರಿಶೀಲಿಸಲು ಅವಕಾಶ ನೀಡುವುದು. ಆರೋಪಿತ ನೌಕರ ಕೇಳುವ ದಾಖಲಾತಿಗಳು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ತಿಳಿದುಬಂದಲ್ಲಿ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲವೆಂದು ತಿಳಿದು ಬಂದಲ್ಲಿ ಅಂತಹ ಕೋರಿಕೆಯನ್ನು ತಿರಸ್ಕರಿಸುವ ಅಧಿಕಾರವು ಶಿಸ್ತು ವಿಚಾರಣಾಧಿಕಾರಿಗೆ ದತ್ತವಾಗಿರುತ್ತದೆ.<br>3. ನೌಕರನಿಂದ ಈ ರೀತಿ ಕಾರಣ ಕೇಳುವ ನೋಟೀಸಿಗೆ ವಿವರಣೆ ಬಂದ ನಂತರ ವಿವರಣೆಯನ್ನು ಪರಿಶೀಲಿಸಿ, ಶಿಸ್ತು ಕ್ರಮವನ್ನು ಕೈಬಿಡುವ ಅಧಿಕಾರವು ಶಿಸ್ತು ಪ್ರಾಧಿಕಾರಿಗೆ (ಆಡಳಿತ ಮಂಡಲಿ) ಇರುತ್ತದೆ.<br>**ಇತರೆ :**<br>1. ವೈಯಕ್ತಿಕ ನೆಲೆಯಲ್ಲಿ ಆಡಳಿತ ವರ್ಗವು ತಮ್ಮ ಅನುಭವ ಮತ್ತು ನೌಕರನ ವಿಶಿಷ್ಠ ನಡವಳಿಕೆಗಳನ್ನು ನೋಡಿಕೊಂಡು ವಿಶೇಷ ಸಂದರ್ಭಗಳಲ್ಲಿ ಲಘುತರ ಆರೋಪಗಳನ್ನು ಕೂಡ ಗುರುತರ ಆರೋಪಗಳೆಂದು ಪರಿಗಣಿಸಬಹುದು.<br>2. ಸಂಘದಲ್ಲಿ ಆಡಳಿತ ವರ್ಗ ಮತ್ತು ನೌಕರರ ಸಂಬಂಧ ಕಾನೂನು ಪರಿಭಾಷೆಯಲ್ಲಿ ಯಜಮಾನ ಮತ್ತು ಸೇವಕನದ್ದಾಗಿರುತ್ತದೆ. (ಮಾಸ್ಟರ್ ಅಂಡ್ ಸರ್ವೆಂಟ್)<br>3. ನೌಕರರಲ್ಲಿನ ಶಿಸ್ತನ್ನು ಪೋಷಿಸುವ ದೃಷ್ಟಿಯಿಂದ ನೌಕರರ ಅಶಿಸ್ತನ್ನು ಹತ್ತಿಕ್ಕುವಲ್ಲಿ ಆಡಳಿತ ವರ್ಗವು ಆಗಿಂದಾಗ್ಗೆ ನೌಕರರನ್ನು ಶಿಕ್ಷಿಸಬಹುದು. ಶಿಕ್ಷೆಯು ಆರೋಪಗಳ ತೀವ್ರತೆಯ ಪ್ರಮಾಣಕ್ಕನುಗುಣವಾಗಿ ಲಘುತರ ಶಿಕ್ಷೆಗಳು ಮತ್ತು ಗುರುತರ ಶಿಕ್ಷೆಗಳು ಎಂದು ಎರಡು ವಿಧವಾಗಿರುತ್ತವೆ.<br>4. ಕೆಳಗಿನ ಯಾವುದೇ ದಂಡನೆಯನ್ನು ವಿಧಿಸುವಾಗ ಸಹಜ ನ್ಯಾಯವನ್ನು ಗಮನದಲ್ಲಿಟ್ಟುಕೊಂಡು ಕ್ಷಿಪ್ರ ಅಥವಾ ಆಂತರಿಕ ವಿಚಾರಣೆಯ ನಂತರವೇ ವಿಧಿಸಬೇಕು.<br>5. ಮುಂದಿನ ಪರಿಚ್ಛೇದದಲ್ಲಿ ವಿವರವಾಗಿ ಸೂಚಿಸಿರುವ ಮಾರ್ಗದರ್ಶಿ ಸೂತ್ರದಂತೆ ವಿಚಾರಣೆ ಮಾಡಿದ ಶಿಸ್ತುಪ್ರಾಧಿಕಾರವು ನಿರ್ಧರಿಸಿದ ಶಿಕ್ಷೆಯು, ಈ ನಿಯಮಾವಳಿ ಯಲ್ಲಿ ಸೂಚಿಸಿದ ಮೇಲ್ಮನವಿಗೆ ಮಾತ್ರವೇ ಅರ್ಹವಾಗುತ್ತದೆ. |

**ತಿದ್ದುಪಡಿಗೆ ಕಾರಣ :** ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ತಿದ್ದುಪಡಿಗೆ ಅನು ಗುಣವಾಗಿ ತಿದ್ದುಪಡಿ ಪ್ರಸ್ತಾಪಿಸಿದೆ.

| ಉಪವಿಧಿ | ಹಾಲಿ ಇರುವ ಉಪವಿಧಿ | ಉಪವಿಧಿ | ಸೂಚಿಸಿರುವ ತಿದ್ದುಪಡಿ | |
|---|---|---|---|---|
| | | | **ಅ) ಗುರುತರ ಶಿಕ್ಷೆಗಳು : ದಂಡನೆಗಳು**<br>1. ಸೇವೆಯಿಂದ ವಜಾಮಾಡುವುದು (ಡಿಸ್ಮಿಸಲ್)<br>2. ಸೇವೆಯಿಂದ ನಿವೃತ್ತಿಗೊಳಿಸುವುದು (ಟರ್ಮಿನೇಷನ್)<br>3. ಹುದ್ದೆಯ ಶ್ರೇಣಿಯಿಂದ ಕೆಳಗಿನ ಶ್ರೇಣಿಗೆ ಇಳಿಸುವುದು. (ಡಿಮೋಷನ್)<br>4. ತಕ್ಷಣಕ್ಕೆ ಜಾರಿಗೆ ಬರುವಂತೆ ಮತ್ತು ನಿಗದಿ ಮಾಡಿದ ಸಮಯದವರೆಗೆ ಪದೋನ್ನತಿಯನ್ನು ತಡೆ ಹಿಡಿಯುವುದು (ವಿತ್ ಹೋಲ್ಡಿಂಗ್ ಅಪ್ ಪ್ರಮೋಷನ್)<br>5. ವಾರ್ಷಿಕ ಬಡ್ತಿ (ಇನ್‌ಕ್ರಿಮೆಂಟ್) ಯಾ ವಾರ್ಷಿಕ ಬಡ್ತಿಗಳನ್ನು ಖಾಯಂ ಆಗಿ ತಡೆಹಿಡಿಯುವುದು.<br>**ಆ) ಲಘುತರ ಶಿಕ್ಷೆಗಳು : ದಂಡನೆಗಳು**<br>1. ತಕ್ಷಣ ಜಾರಿಗೆ ಬರುವಂತೆ ವಾರ್ಷಿಕ ಬಡ್ತಿಯನ್ನು ಸೀಮಿತ ಅವಧಿಗೆ ತಡೆಹಿಡಿಯುವುದು (ಸ್ಟಾಪಿಂಗ್ ಇನಕ್ರಿಮೆಂಟ್ ವಿಥೌಟ್ ಕ್ಯುಮ್ಯುಲೇಟೀವ್ ಎಫೆಕ್ಟ್).<br>2. ನೌಕರನಿಂದ ಸಂಘಕ್ಕೆ ಸಂಭವಿಸುವ ನಷ್ಟವನ್ನು ನೌಕರನ ವೇತನದಿಂದ ಅಥವಾ ಇತರೆ ಮೂಲಗಳಿಂದ ಪೂರ್ತಿಯಾಗಿ ಅಥವಾ ಅಂಶಿಕವಾಗಿ ಭರಿಸುವುದು.<br>3. ದಂಡ ವಸೂಲು ಮಾಡುವುದು.<br>4. ವಾಗ್ದಂಡನೆ ವಿಧಿಸುವುದು. (ಸೆನ್ ಶ್ಯುರ್).<br>5. ಮೇಲಿನ ಯಾವುದೇ ಶಿಕ್ಷೆಯನ್ನು ವಿಧಿಸಿದಲ್ಲಿ ಎಲ್ಲಾ ದಂಡನೆಗಳನ್ನು ನೌಕರರ ಸೇವಾ ಪುಸ್ತಕದಲ್ಲಿ ಲಿಖಿತವಾಗಿ ನಮೂದಿಸಬೇಕು. | **ತಿದ್ದುಪಡಿಗೆ ಕಾರಣ : ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ತಿದ್ದುಪಡಿಗೆ ಅನು ಗುಣವಾಗಿ ತಿದ್ದುಪಡಿ ಪ್ರಸ್ತಾಪಿಸಿದೆ.** |

## ಠೇವಣಾತಿಗಳ ಮೇಲಿನ ಬಡ್ಡಿ ದರ

| | | ರೆಗ್ಯೂಲರ್ | ಹಿರಿಯ ನಾಗರಿಕರಿಗೆ |
|---|---|---|---|
| 15 ದಿನಗಳಿಂದ 90 ದಿನಗಳವರೆಗೆ | - | 4.00% | 4.00% |
| 91 ದಿನಗಳಿಂದ 180 ದಿನಗಳವರೆಗೆ | - | 5.00% | 5.00% |
| 181 ದಿನಗಳಿಂದ 1 ವರ್ಷದವರೆಗೆ | - | 6.00% | 6.00% |
| 1 ವರ್ಷದ ಮೇಲ್ಪಟ್ಟು 2 ವರ್ಷದವರೆಗೆ | - | 7.50% | 8.00% |
| 2 ವರ್ಷದ ಮೇಲ್ಪಟ್ಟು 3 ವರ್ಷದವರೆಗೆ | - | 7.75% | 8.25% |
| 3 ವರ್ಷದ ಮೇಲ್ಪಟ್ಟು | - | 7.50% | 8.00% |

**ಅತಿ ಕಡಿಮೆ ಬಡ್ಡಿ ದರದಲ್ಲಿ ಶೀಘ್ರವಾಗಿ ಸಾಲ ಸೌಲಭ್ಯಗಳು ದೊರೆಯುತ್ತವೆ.**
**ಮಾಹಿತಿಗಾಗಿ ನಮ್ಮ ಬ್ಯಾಂಕಿನ ಶಾಖೆಗಳಿಗೆ ಭೇಟಿ ಕೊಡಿ.**

## ಆಡಳಿತಾಧಿಕಾರಿಗಳು



ಡಿ. ವಿ. ಆರಾಧ್ಯಮಠ
ಪ್ರಧಾನ ವ್ಯವಸ್ಥಾಪಕರು



ಬಿ.ಎಸ್. ಮಲ್ಲೇಶ್
ಉಪಪ್ರಧಾನ ವ್ಯವಸ್ಥಾಪಕರು



ಆರ್. ಎ. ಪ್ರಸನ್ನ
ವ್ಯವಸ್ಥಾಪಕರು
ಸಾಲ ವಿಭಾಗ, ಆಡಳಿತ ಕಛೇರಿ.



ಜಿ.ಕೆ. ವಿಜಯ್ ಕುಮಾರ್
ವ್ಯವಸ್ಥಾಪಕರು
ಪ್ರಧಾನ ಕಛೇರಿ.



ಎಲ್. ಎಸ್. ಗೀತ
ವ್ಯವಸ್ಥಾಪಕರು
ಪಿ.ಜೆ. ಬಡಾವಣೆ ಶಾಖೆ.



ಬಿ. ನಾಗಭೂಷಣ್
ವ್ಯವಸ್ಥಾಪಕರು
ಚೌಕಿಪೇಟೆ ಶಾಖೆ.



ಎಂ.ಎಂ. ಜಯಶೀಲ
ವ್ಯವಸ್ಥಾಪಕರು
ದೇವರಾಜ ಅರಸ್ ಬಡಾವಣೆ ಶಾಖೆ



ಕೆ.ಬಿ ಸಾನಂದ ಗಣೇಶ್
ವ್ಯವಸ್ಥಾಪಕರು
ನರಸರಾಜ ರಸ್ತೆ ಶಾಖೆ



ಎಸ್. ಗಣೇಶಪ್ಪ
ಪ್ರಭಾರ ವ್ಯವಸ್ಥಾಪಕರು
ಹೊನ್ನಾಳಿ ಶಾಖೆ.

## ಸದಸ್ಯರ ಗಮನಕ್ಕೆ

1. **ಬ್ಯಾಂಕಿನ ಮಾನ್ಯ ಸದಸ್ಯರು ತಮ್ಮ ಷೇರು ಖಾತೆಯಲ್ಲಿ ಕನಿಷ್ಠ ಷೇರು ಮೊತ್ತ ರೂ. 1000/– ಹೊಂದಿರುವುದು ಕಡ್ಡಾಯವಾಗಿರುತ್ತದೆ. ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂತಹ ಸದಸ್ಯರು ಸಾಮಾನ್ಯ ಸಭೆಯಲ್ಲಿ ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಕಳೆದು ಕೊಳ್ಳುವರು. ಆದುದರಿಂದ ಎಲ್ಲಾ ಸದಸ್ಯರು ತಪ್ಪದೇ ಮಹಾಸಭೆಗೆ ಹಾಜರಾಗಲು ಕೋರಿದೆ.**
2. ಪ್ರತಿಯೊಬ್ಬ ಜಾಮೀನುದಾರರು ಸಾಲಗಾರರಷ್ಟೇ ತಾವು ಜಾಮೀನಾದ ಬ್ಯಾಂಕಿನ ಸಾಲದ ಮೊತ್ತಕ್ಕೆ ಜವಾಬ್ದಾರರಾಗಿರುತ್ತಾರೆ. ಸದಸ್ಯರು ಜಾಮೀನು ಆಗುವ ಪೂರ್ವದಲ್ಲಿ ಸಾಲಗಾರರ ಸಾಂಪತ್ತಿಕ ಸ್ಥಿತಿ, ಸಾಲದ ಉದ್ದೇಶ, ಸಾಲದ ಕಂತುಗಳನ್ನು ಪಾವತಿಸುವ ಶಕ್ತಿ, ಇವುಗಳ ಬಗ್ಗೆ ತಿಳಿದುಕೊಳ್ಳಲು ಹಾಗೂ ನಿಗದಿಯಾದ ಕಾಲಕ್ಕೆ ಸಾಲಗಾರನು ಕಂತುಗಳನ್ನು ಸರಿಯಾಗಿ ಕಟ್ಟುವಂತೆ ಮಾಡಿ ಸಹಕರಿಸಲು ಕೋರಿದೆ.
3. ಡಿವಿಡೆಂಡ್ ಪಡೆಯಲು ವಿನಂತಿ : ಮಾನ್ಯ ಸದಸ್ಯರು 2014–15ನೇ ಸಾಲಿನ ಡಿವಿಡೆಂಡನ್ನು ಈವರೆಗೂ ಪಡೆಯದೇ ಇದ್ದಲ್ಲಿ. ದಿನಾಂಕ: 31–12–2018 ರೊಳಗಾಗಿ ಪಡೆಯಲು ಸೂಚಿಸಿದೆ. ತಪ್ಪಿದಲ್ಲಿ 2014–15ನೇ ಸಾಲಿನ ಡಿವಿಡೆಂಡನ್ನು ಬ್ಯಾಂಕಿನ ಉಪವಿಧಿ ನಂ.106ರ ಮೇರೆಗೆ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.
4. ಗುರುತಿನ ಕಾರ್ಡ್ ಪಡೆಯಲು ವಿನಂತಿ : ಸಹಕಾರಿ ಕಾಯ್ದೆ ಪ್ರಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಮಾನ್ಯ ಸದಸ್ಯರು "ಗುರುತಿನ ಚೀಟಿ" (Identity Card) ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದಲ್ಲಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಬ್ಯಾಂಕಿನ ಮುಖ್ಯ ಕಛೇರಿಯಲ್ಲಿ ಸದಸ್ಯರುಗಳ "ಗುರುತಿನ ಕಾರ್ಡ್" ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಲಾಗಿದೆ. ಮಾನ್ಯ ಸದಸ್ಯರು ಕೂಡಲೇ ಬ್ಯಾಂಕಿನ ಕೆಲಸದ ವೇಳೆಯಲ್ಲಿ (ಬೆಳಿಗ್ಗೆ 10–30 ರಿಂದ ಸಂಜೆ 5–00 ರವರೆಗೆ) ಬಂದು ಗುರುತಿನ ಕಾರ್ಡ್ ಪಡೆಯಲು ಕೋರಿದೆ.
5. ಆರ್.ಬಿ.ಐ. ನಿರ್ದೇಶನದ ಪ್ರಕಾರ ಸಿ–ಕೆ.ವೈ.ಸಿ. ಪದ್ಧತಿಯು ಜಾರಿಯಲ್ಲಿದ್ದು ಬ್ಯಾಂಕಿನ ಗ್ರಾಹಕರು ಯಾವುದೇ ಖಾತೆ / ಸದಸ್ಯತ್ವ ಹೊಂದಬೇಕಿದ್ದಲ್ಲಿ ಪಾನ್ ಅಥವಾ ಆಧಾರ್ ಕಾರ್ಡ್‌ನಲ್ಲಿರುವಂತೆಯೇ ತಮ್ಮ ಹೆಸರನ್ನು ನಮೂದಿಸಿ ಖಾತೆ / ಸದಸ್ಯತ್ವ ಪ್ರಾರಂಭಿಸತಕ್ಕದ್ದು ಹಾಗೂ ಹಾಲಿ ಇರುವ ಗ್ರಾಹಕರು ಕೂಡ ದಾಖಲಾತಿ ಒದಗಿಸಿ ಇದರಂತೆ ಸರಿಪಡಿಸಿಕೊಳ್ಳತಕ್ಕದ್ದು.

## ಗ್ರಾಹಕರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ

* ಬ್ಯಾಂಕಿನ ಮುಖ್ಯ ಕಛೇರಿ ಹಾಗೂ ಶಾಖೆಗಳಲ್ಲಿ ಆರ್.ಟಿ.ಜಿ.ಎಸ್. **(RTGS)** / ಎನ್.ಇ.ಎಫ್.ಟಿ **(NEFT)** ಸೌಲಭ್ಯ ಕಲ್ಪಿಸಲಾಗಿದೆ.
* ಉಳಿತಾಯ, ಚಾಲ್ತಿ, ಓವರ್ ಡ್ರಾಫ್ಟ್ ಖಾತೆದಾರರಿಗೆ ರೂಪೆ ಎ.ಟಿ.ಎಂ. ಡೆಬಿಟ್ ಕಾರ್ಡ್‌ಗಳು **(Insta Cards & Personalised Cards)** ಲಭ್ಯವಿರುತ್ತವೆ. ಇದರಲ್ಲಿ **ATM - POS - E com** ಸೌಲಭ್ಯವಿರುತ್ತದೆ.
* ಸದಸ್ಯರ/ಗ್ರಾಹಕರ ವ್ಯವಹಾರದ ಅಭಿವೃದ್ಧಿಗೆ, ಗೃಹನಿರ್ಮಾಣ, ವಾಹನ ಸಾಲ, ಆಭರಣ ಸಾಲ, ಇನ್ನೂ ಅನೇಕ ರೀತಿಯ ಸಾಲ ಸೌಲಭ್ಯಗಳು, ಅತೀ ಕಡಿಮೆ ಬಡ್ಡಿ ದರದಲ್ಲಿ ಶೀಘ್ರವಾಗಿ ದೊರೆಯುತ್ತವೆ.
* ಗ್ರಾಹಕರ ಠೇವಣಾತಿಗಳ ಮೇಲೆ ಆಕರ್ಷಕ ಬಡ್ಡಿದರ, ಹಿರಿಯ ನಾಗರೀಕರಿಗೆ 0.50% ಹೆಚ್ಚಿನ ಬಡ್ಡಿದರ ನೀಡಲಾಗುವುದು.
* ಇತ್ತೀಚೆಗೆ ಕೇಂದ್ರ ಸರ್ಕಾರ ಮಂಡಿಸಿದ ಆರ್ಥಿಕ ಮುಂಗಡ ಪತ್ರದ ಪ್ರಕಾರ ಬ್ಯಾಂಕಿನ ಸದಸ್ಯರ ಠೇವಣಿಗಳ ಮೇಲೆ ವಾರ್ಷಿಕ ರೂ. 10 ಸಾವಿರಕ್ಕೂ ಹೆಚ್ಚು ಬಡ್ಡಿ ನೀಡಿದಲ್ಲಿ ಆದಾಯದ ಮೂಲದಲ್ಲಿಯೇ ಆದಾಯಕರ (T.D.S.) ಕಡಿತ ಮಾಡಬೇಕಾಗುತ್ತದೆ. ಆದಾಯ ತೆರಿಗೆ ಮಿತಿಗಿಂತ ಕಡಿಮೆ ಇದ್ದಲ್ಲಿ ನಮೂನೆ 15G ಅಥವಾ ಹಿರಿಯ ನಾಗರೀಕರಾಗಿದ್ದಲ್ಲಿ ನಮೂನೆ 15H ನ್ನು ದ್ವಿ ಪ್ರತಿಯಲ್ಲಿ ಸಂಬಂಧಪಟ್ಟ ಶಾಖೆಯಲ್ಲಿ ಪ್ರತಿ ವರ್ಷವೂ ಏಪ್ರಿಲ್ 20 ರ ಒಳಗೆ ಮುಂಗಡವಾಗಿ ನೀಡಿದಲ್ಲಿ ಆದಾಯಕರ ಕಡಿತಗೊಳಿಸಲಾಗುವುದಿಲ್ಲ.

**ಖಾತೆದಾರರು ಹಾಗೂ ಸದಸ್ಯರು ತಮ್ಮ ಬ್ಯಾಂಕಿನ ಖಾತೆಗಳಿಗೆ**
**ಪಾನ್‌ಕಾರ್ಡ್, ಆಧಾರ ಕಾರ್ಡ್ ಕೊಡುವುದು ಕಡ್ಡಾಯ ಮಾಡಲಾಗಿದೆ.**

Book-post

**To,**


## THE DAVANGERE URBAN CO-OPERATIVE BANK LTD.,

Head Office : P.B. No. 217, P.B. Road, Davangere - 577 002.

| | | | |
|---|---|---|---|
| ಮುಖ್ಯ ಕಛೇರಿ (ಪ್ರಧಾನ ವ್ಯವಸ್ಥಾಪಕರು) | : 231155 | ಚೌಕಿಪೇಟೆ ಶಾಖೆ | : 272543 / 45 |
| ಮುಖ್ಯ ಕಛೇರಿ (ಸಾಲಗಳು) | : 272540 | ನರಸರಾಜ ರಸ್ತೆ ಶಾಖೆ | : 272544 / 49 |
| ಮುಖ್ಯ ಕಛೇರಿ (ಬ್ಯಾಂಕಿಂಗ್) | : 272541 | ಪಿ.ಜೆ. ಬಡಾವಣೆ ಶಾಖೆ | : 272546 |
| ಫ್ಯಾಕ್ಸ್ (08192) | : 230929 | ದೇವರಾಜ್‌ಅರಸ್ ಬಡಾವಣೆ ಶಾಖೆ | : 272547 |
| | | ಹೊನ್ನಾಳಿ ಶಾಖೆ (08188) | : 251905 |

web : www.ducbank.com
email : ducbank@yahoo.com


Eskay DVG. Ph : 254042